
1958



ವಿಶ್ವರೂಪ ಸಾಹಿತ್ಯ ವಿಸ್ತರಣ
ಪುಂಡೂರು.

ಶೋಭನ ಗೀತೆ

[ಹಾಡುಗಳ ಸಂಕಲನ]

*

ಕವಿ:
ಶ್ರೀ। ಪುಂಡೂರು ದಾಮೋದರ ಪುಣಿಂಚತ್ತಾಯ

1958

ವಿಶ್ವರೂಪ ಸಾಹಿತ್ಯ ವಿಸ್ತರಣ,
ಪುಂಡೂರು.
(ಅಂಚೆ) ನೆಕ್ರಾಜೆ : : ಪೆರಡಾಲ ದ. ಕ.

ಮುದ್ರಕರು:
ವಿಜಯ ಮುದ್ರಣಾಲಯ,
ಮಂಗಳೂರು.

ವಿಶ್ವರೂಪ ಸಾಹಿತ್ಯ ವಿಸ್ತರಣ-೧

ಪ್ರಧಾನ ಸಂಪಾದಕರು:
ಪು. ವೆಂ. ರಾಜ್ ಪುಂಡೂರು

ಸಲಹೆಗಾರ ಮಂಡಳಿ:
ಕೆ. ರಾಮಚಂದ್ರ ರಾವ್,
ಮಂಗಳೂರು.
ಬಿ. ಯಸ್. ಸೂರ್ಯನಾರಾಯಣ
ಬಿ. ಎ. ಬೆಂಗಳೂರು
ಎ. ವಾ. ಬಲ್ಲಾಳ್, ಉಡುಪಿ.

*

ಬೆಲೆ:
ಒಂದು ರೂಪಾಯಿ.

ಕಾರ್ಯಾಲಯ:
ಶಾರದಾ ಮಂದಿರ
ಪುಂಡೂರು
(ಅಂಚೆ) ನೆಕ್ರಾಜೆ : ಪೆರಡಾಲ,
ದ. ಕ.

*

ಮುಂದಿನ ಪ್ರಕಟಣೆ
'ಪುಣ್ಯಭೂಮಿ'
(ಕವನ ಸಂಕಲನ)

ಮಾರಾಟಗಾರರು

(i)
ಸಮಾಜ ಪುಸ್ತಕಾಲಯ
ಭಗತಸಿಂಗ ಬೀದಿ,
ಧಾರವಾಡ.

(ii)
ಸ್ಟ್ಯಾಂಡರ್ಡ್ ಬುಕ್ ಡಿಪೋ
ಅವೆನ್ಯೂ ರೋಡ್,
ಬೆಂಗಳೂರು-2.

(iii)
ಕಥಾಕುಂಜ ಗ್ರಂಥ ಭಾಂಡಾರ
ಗಣಪತಿಗಲ್ಲಿ,
ಬೆಳಗಾವಿ.

(iv)
ಅರವಿಂದ ಗ್ರಂಥಾಲಯ
ಚಡಚಣ,
ಬಿಜಾಪುರ.

(v)
M. D. ರಾಮಸ್ವಾಮಿ ನ್ಯೂ.ಏ.
ಪೋರ್ಟ್ ರೋಡ್,
ಶಿವಮೊಗ್ಗ.

(vi)
ಮೌಲವಿ ಬುಕ್ ಡಿಪೋ
ಜಾಲ್ಸೂರು ರೋಡ್,
ಕಾಸರಗೋಡು.

ಪ್ರಕಾಶಕರ ಮಾತು

ಕನ್ನಡದ ಭಾಷಾವೃಕ್ಷವು ಬಹುಮುಖ ಸಾಹಿತ್ಯದ ಶಾಖೆಗಳಿಂದ ಕೂಡಿಕೊಂಡಿದೆ. ಗದ್ಯಪದ್ಯಮಯವಾಗಿ ಅನಂತ ವಿಸ್ತಾರವೆನಿಸಿದ ಈ ಸಾಹಿತ್ಯವು ಜಾನಪದ ಮತ್ತು ಅಜಾನಪದಗಳೆಂಬ ಭೇದ ಪರಂಪರೆಯಿಂದ ಆರಂಭವಾಗಿ,—ಕಾವ್ಯ, ನಾಟಕ, ಕಾದಂಬರಿ, ದಾಸಗೀತೆ, ಯಕ್ಷಗಾನ ಮುಂತಾದ ವೈವಿಧ್ಯಗಳೊಂದಿಗೆ ಸೋಬಾನೆ ಹಾಡುಗಳ ಪ್ರಭೇದದಿಂದಲೂ, ಕನ್ನಡಮ್ಮನನ್ನು ಸರ್ವಾಂಗ ಸುಂದರವಾಗಿ ಮೆರೆಯುವಂತೆ ಮಾಡಿದೆ.

ಶ್ರೀ ಪುಣಿಂಚತ್ತಾಯರ ಈ ಸಂಕಲನವು ಅಂತಹ ಹಲವಾರು ಸೋಬಾನೆ ಹಾಡುಗಳ ರಚನೆಯಿಂದ ಮೆರುಗುಗೊಂಡಿದೆ. ಸಾಮಾನ್ಯವಾಗಿ ಸೋಬಾನೆ ಹಾಡುಗಳಲ್ಲಿರುವ ಶೋಭೆ ಒಂದು ಪ್ರತ್ಯೇಕ. ಆದರೆ ಇದರಲ್ಲಿ ಆ ಶೋಭೆಯೂ ಇದೆ. ಅದಕ್ಕಿಂತಲೂ ಮಿಗಿಲಾಗಿ, ಕವಿಹೃದಯದಿಂದ ಉಗಮಿಸಿದ ಉತ್ತಮ ಪ್ರತಿಭಾಶಕ್ತಿ ಈ ಕೃತಿಗಳಿಗೆ ಜೀವಕಳೆ ತುಂಬಿದೆ.

ಸೋಬಾನೆ ಹಾಡುಗಳು ನಮ್ಮ ಭಾರತೀಯ ಸಂಸ್ಕೃತಿಯ ಮಂಗಳಮಯ ವಾತಾವರಣದ ಪ್ರತೀಕವಾಗಿವೆ. ಮದುವೆ, ಮುಂಜಿ, ಪುತ್ರೋತ್ಸವ ಮುಂತಾದ ವೇಳೆಗಳಲ್ಲಿ ಇಂತಹ ಹಾಡುಗಳು ನಮ್ಮ ನಾಡಿನ ಮುತ್ತೈದೆಯರ ಮಧುರ ಕಂಠದಿಂದ ಹಾಡಿ ಹರಿದ ಸುಂದರ ಸಾಹಿತ್ಯಧಾರೆಗಳೆನಿಸುತ್ತವೆ.

ಆನಂದಕ್ಕೂ-ಸಂಗೀತಕ್ಕೂ ನಿಕಟ ಸಂಬಂಧವಿದೆ. ಹೃದಯದ ರಂಗಭೂಮಿಯಲ್ಲಿ, ಆನಂದೋತ್ಸವಗಳ ಮಧುರನಾಟ್ಯ ನಡೆದಾಗ, ಭಾವಾವೇಶದಿಂದ ತಾನೇತಾನಾಗಿ ಗಾನಾಮೃತವಾಹಿನಿ-ಅಲೆ ಅಲೆಯಾಗಿ ಹೊರಹೊಮ್ಮುತ್ತದೆ. ಆ ಅಲೆಯಲೆಗಳ ಗಂಭೀರಸಾಗರದಲ್ಲಿ ಮುಳುಗಿ, ಮಿಂದು ಮಡಿಯಾದರೆ-ಆ ಆನಂದ, ಆ ಉತ್ಸವಗಳ ಬಗ್ಗೆ ಸಹೃದಯರು ಕಂಡುಕೊಂಡ ಉದ್ದೇಶ ಯಶಸ್ವಿಯಾಗುತ್ತದೆ. ಅಂತೆಯೇ ನಮ್ಮ ವೈದಿಕ ಲೌಕಿಕ ಸಂಸ್ಕೃತಿಗಳಲ್ಲಿ ಹೆಚ್ಚಾಗಿ ಮಂಗಳಮಯ ಸನ್ನಿವೇಶಗಳಲ್ಲಿ, ನಾಡಿನ ಹದಿಬದೆಯರು ಈ ರೀತಿಯ 'ಸುವ್ವಿಲಾಲೆ' ಹಾಡುಗಳನ್ನು ಹಾಡುವುದು ರೂಢಿಯಾಗಿದೆ.—ಎಂದಿನಿಂದ ಇದರ ಉಗಮವಾಗಿರಬೇಕು?.........ಎಂಬ ಸಂಶೋಧನೆಯ ಬಗ್ಗೆ ನಮ್ಮ ಸಾಂಸ್ಕೃತಿಕ ಪುರೋಗಮದ ಆರಂಭ ಕಾಲವನ್ನಷ್ಟೇ ಊಹೆಗೆ ನಿಲುಕಿಸಿಕೊಂಡರೆ ಸಾಕು-ಅದೇ ಇದಕ್ಕೆ ಸಾಕ್ಷ್ಯವನ್ನು ಕಲ್ಪಿಸಿಕೊಡುತ್ತದೆ. ಹಾಗೆಯೇ ಇಂದಿಗೂ ಅದು ಅವ್ಯಾಹತವಾಗಿ ಪ್ರಚಾ

ರಕ್ಕೆ ಬಂದಿದೆ. ಅದೇ ಹಳೆಯ ಪಂಥದ ಜಾನಪದ ಸಂಪ್ರದಾಯಕ್ಕೇ ಇಲ್ಲಿ ಕವಿಗಳು ಹೊಸರೂಪುಕೊಟ್ಟು, ಹೊಸ ಪ್ರತಿಭೆಯ ಕಿರಣವನ್ನು ಬೀರಿ, ಬೆಳಕು ತೋರಿದ್ದಾರೆ.

ಕೇವಲ ನಾಲ್ಕೈದು ದಶಕಗಳ ಹಿಂದೆ, ಅಲ್ಲಲ್ಲಿ ಅಪರೂಪವಾಗಿ ಯಾದರೂ ಮದುವೆ ಮಂಟಪಗಳಲ್ಲಿ ದಿಬ್ಬಣಿಗರು, ನೆರೆಕರೆಯವರು, ನಂಟರು, ಇಷ್ಟಮಿತ್ರರು ಮುಂತಾದವರು ನೆರೆದಾಗ,-ಅಲ್ಲಿ ಮುಖ್ಯವಾಗಿ ಅತಿಥಿಗಳಾಗಿ ಬಂದ ದಿಬ್ಬಣಿಗರಿಗೂ, ಮನೆಯ ದಿಬ್ಬಣಿಗರಿಗೂ ಹಾಡಿನ ಪಂದ್ಯವೇ ಜರಗಿ, ಹಾಗೆ ಬೆಳೆದ ಸ್ಪರ್ಧೆಯಲ್ಲಿ ಹಾಡುತ್ತಾ ಹಾಡುತ್ತಾ ಸ್ಫೂರ್ತಿಯಿಂದ ಕೊನೆಗೆ ಸ್ವಯಂಕೃತಿಗಳನ್ನೆ ರಚಿಸಿ, ತಮ್ಮ ವಿದ್ವತ್ ಪ್ರದರ್ಶನವನ್ನು ಮಾಡಿ, ಸಭೆಯಲ್ಲಿ 'ಶಾಬಾಶ್‌ಗಿರಿ'ಯನ್ನು ಪಡೆದ ವಿದು ಷಿಯರೂ ಇದ್ದರಾದರೆ ಈಗಿನ ಸುಧಾರಿತವಾತಾವರಣದಲ್ಲಿ ಆ ತೆರ ನಾದ ಹಿಂದಿನ ಪರಂಪರೆಯ ಸಂಸ್ಕೃತಿಯ ಸ್ವರೂಪಗಳೇ ಮೆಲ್ಲಮೆಲ್ಲನೆ ಮಾಯವಾಗಲಾರಂಭಿಸಿವೆ. ಶಾಸ್ತ್ರೀಯ ಸಂಗೀತವು ಪ್ರಚಾರಕ್ಕೆ ಬಂದಾಗ, ಆ ಕಲಾವೈಭವದೆದುರು-ಸಂಕೋಚಪಟ್ಟು, ಸಾಂಪ್ರದಾಯಿಕವಾಗಿ ಬಂದ ತಮ್ಮ ಜಾನಪದ ಸಂಸ್ಕೃತಿಯ ಹಳೆಯಹಾಡುಗಳನ್ನು ಅಡಗಿಸುವ ಪ್ರಯತ್ನ ಎಲ್ಲೆಲ್ಲೂ ನಡೆದಿದೆ. ಇಂತಹ ವೇಳೆಯಲ್ಲಿ ಆ ರೀತಿಯ ಸಂಸ್ಕೃತಿಯ ಪುನ ರುಜ್ಜೀವನಕ್ಕೆ ಪ್ರೋತ್ಸಾಹವೀಯುವ ಶ್ರೀ ಪುಣಿಂಚತ್ತಾಯರ ಕೃತಿಗಳಿಗೆ ನಾವು ಮನ್ನಣೆ ಕೊಡಲೇಬೇಕು.

ಸದ್ಯ ಅವೆಲ್ಲವನ್ನೂ ಒಮ್ಮೆ ಒಂದುಗೂಡಿಸಿ ಪ್ರಕಟಪಡಿಸಬೇಕೆಂದಿದ್ದ ನಮ್ಮ ಇಚ್ಛೆಯನ್ನು ನೆರವೇರಿಸಿಕೊಟ್ಟ ಶ್ರೀ ಪುಣಿಂಚತ್ತಾಯರಿಗೆ ನಾವು ತುಂಬಾ ಕೃತಜ್ಞರು ಅಲ್ಲದೆ ಈ ಸಂಕಲನವನ್ನು ಆಮೂಲಾಗ್ರವಾಗಿ ಓದಿ ಸಮುಚಿತವಾದ ಸಲಹೆಗಳನ್ನಿತ್ತ ಶ್ರೀ ಪಿ. ರಾಮಕೃಷ್ಣ ಭಟ್ಟ. ಸಂಸ್ಕೃತ ಲೆಕ್ಚರರ್ —ಗವರ್ನ್ಮೆಂಟ್ ಆರ್ಟ್ಸ್ ಕಾಲೇಜು ಮಂಗಳೂರು — ಇವರಿಗೂ ವೇದ ಮೂರ್ತಿಗಳಾದ ಶ್ರೀ ಮಧೂರು ಶಿವನಾರಾಯಣಶರಳಾಯ ರಿಗೂ ಹಾಗೂ ಕವಿ ಕೃತಿಪರಿಚಯವನ್ನು ಒದಗಿಸಿಕೊಟ್ಟ ಶ್ರೀ. ವಿ. ಬಿ. ಮರ್ಕಾಡಿಯವರಿಗೂ, ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ವಿಜಯ ಪ್ರೆಸ್ಸಿನ ಮೆನೇಜರರಾದ ಶ್ರೀ. ಕೆ. ರಾಮಚಂದ್ರ ರಾಯರಿಗೂ ಕೃತಜ್ಞ ರಾಗಿದ್ದೇವೆ.

—ಪ್ರಕಾಶಕರು.

ಕವಿ-ಕೃತಿ-ಪರಿಚಯ

......ಈ ಕವಿಯಾರು ? ಎಂಬುದೊಂದು ಸಮಸ್ಯೆಯು ಬಹುದೀರ್ಘ ಕಾಲ ನನ್ನ ತಲೆಯಲ್ಲಿ ಸುಳಿಯಿತು.

"ಏನು? ತಾವೆಲ್ಲಿಂದ ಬಂದವರು"-ಎಂಬ ಮೃದುಮಧುರ ವಿನೀತ ಪದಧ್ವನಿ ನನ್ನನ್ನು ಕ್ಷಣಕಾಲ ಚಕಿತಗೊಳಿಸಿತು.

ಮಾತಿನ ಧಾಟಿಯಲ್ಲಿ ದೊರಕುವ ಪದಗಳಿಗೆ ಮೂಲವೆಲ್ಲಿ? ಎಂದು ಶೋಧಿಸುವ ಈ ವ್ಯಕ್ತಿ,-ಪ್ರತಿಯೊಂದೂ ವ್ಯಂಗ್ಯಧ್ವನಿಯನ್ನು ತರಂಗ ವಾಗಿ ಎಬ್ಬಿಸುವ ಈ ವ್ಯಕ್ತಿ,-ನನ್ನ ಕಣ್ಣಿಗೆ-ನನ್ನ ಕಿವಿಗೆ-ಆಶ್ಚರ್ಯ ವನ್ನು ಮಾಡುತ್ತಿತ್ತು -ಬುದ್ಧಿಗೆ ಬೆಳಕನ್ನು ನೀಡುತ್ತಿತ್ತು.

ಅತೀಸ್ಥೂಲವಲ್ಲದ ಸಾಮಾನ್ಯತರ ದೇಹಾಕೃತಿಯು, ತಲೆಗೂದಲು ನರೆಯಾಂತ, ಬ್ರಾಹ್ಮ್ಯತೇಜಸ್ಸಿನ ಈ ವ್ಯಕ್ತಿಯೇ ಶ್ರೀಮಾನ್ ಪುಂಜೂರು ದಾಮೋದರ ಪುಣಿಂಚತ್ತಾಯರು-ಎಂದು ತಿಳಿದು ನನಗೆ ಅತ್ಯಂತ ಆನಂದ ವಾಯಿತು.

ಇವರು ಕವಿಗಳು ಹೌದೆಂಬುದು-ಇವರ ಕೃತಿಗಳನ್ನು ಆಸ್ವಾದಿಸಿದ ಕೆಲವು ಸಹೃದಯರ ಮೂಲಕ ಈ ಹಿಂದೆಯೇ ನನ್ನ ನೆನಪಿಗೆ ಬಂದಿತ್ತು. ಅಲ್ಲದೆ ಶ್ರೀಯುತರು ತುಳು ಭಾಷೆಯಲ್ಲಿ ಬರೆದ 'ಕುಂಬಳೆ ಸೀಮೆಯ ಚರಿತೆ' ಎಂಬ ಐತಿಹಾಸಿಕ ಕೃತಿಯನ್ನು ನಾನೇ ಸ್ವತಃ ನೋಡಿದ್ದೆ.

ಶ್ಲೇಷ-ವ್ಯಂಗ್ಯ-ಉತ್ಪ್ರೇಕ್ಷೆ-ಪದಲಾಲಿತ್ಯ-ಪ್ರಾಸಾದಿಕಗುಣ-ಭಾವ ರಂಜನೆ-ಇವು ಶ್ರೀದಾಮೋದರ ಪುಣಿಂಚತ್ತಾಯರ ಪದ್ಯಗಳಲ್ಲಿ ದೊರಕುವ ಸೌಖ್ಯ-ತೃಪ್ತಿ.

ನಾನು ಅವರಲ್ಲಿ ವಿನಂತಿಸಿಕೊಂಡೆ-"ತಾವು ಇನ್ನೇನಾದರೂ ಬರೆದಿರು ವಿರೋ......? ಎಂದು. "ಹೌದು!" ಎಂದುತ್ತರಿಸಿ ಅವರು ಒಳಗೆ ಹೋಗಿ, ಒಂದು ದೊಡ್ಡ ಕಟ್ಟನ್ನು ಹೊತ್ತು ತಂದರು. ಕಾಗದಗಳ ಬಣ್ಣ ಮಾಸಿತ್ತು. ಆದರೆ ಆ ಕಟ್ಟು ಪುನೀತವಾಗಿತ್ತು.

ಎದ್ದು ನಿಂತು ಗೌರವದಿಂದ ಆ ಕಟ್ಟನ್ನು ತೆಗೆದುಕೊಂಡೆ. ಅದ ರೊಳಗೆ ತುಂಬಾ ಪದ್ಯಗಳು. ಆಶು ಕವಿಗಳಾದ ಇವರು ತಾವು ಬರೆದ ಸಮಸ್ತಕವಿತೆಗಳನ್ನೂ ಅದರಲ್ಲಿ ಸಂಗ್ರಹಿಸಿಟ್ಟಿಲ್ಲ. "ಸಾಧ್ಯವಾದಷ್ಟನ್ನು

ಸಂಗ್ರಹಿಸಿಟ್ಟಿದ್ದೇನೆ. ಈ ಕೆಲಸವನ್ನು ನನ್ನ ಚಿರಂಜೀವಿಗಳೇ ಮಾಡಿದ್ದಲ್ಲದೆ, ನಾನೇ ಇವನ್ನು ಸಂಗ್ರಹಿಸಿಡುವುದಕ್ಕೆ ಹೋಗಿಲ್ಲ"ವೆಂದರು.

* * * *

ಮನುಷ್ಯ ಸಂಸ್ಕಾರವಾಗಿ ಪೂರ್ವಷೋಡಶ—ಉತ್ತರ ಷೋಡಶಗಳೆಂದು ಧರ್ಮವಿಧಿಗಳು ವಿಧಿಸಿವೆ. ಅದರಲ್ಲಿ ಮಗುವಿನ ಜೋ ಜೋ— ಜೋಗುಳದಿಂದಾರಂಭಿಸಿ, ಪೂರ್ವಷೋಡಶ ಕರ್ಮಾಂಗದ—ಎಲ್ಲಾ ಶುಭ ಶೋಭನಗಳಲ್ಲಿ ಹಾಡುವ ಮುತ್ತೈದೆಯರ ಹಾಡುಗಳು ಹಾಗೂ ರಾಜಕೀಯ—ಸಾಮಾಜಿಕ—ಧಾರ್ಮಿಕ ಕೃತಿಗಳು ಅವರ ಆ ಸಂಪುಟದಲ್ಲಿದ್ದುವು. ಕೆಲವುಗಳ ಭಾಷೆ ತುಳು—ಹೆಚ್ಚಿನವು ಕನ್ನಡ.

ಆ ಕಟ್ಟಿನಲ್ಲಿ ಮತ್ತೊಂದು ತುಣುಕು ಏನು? ಎಂದು ನನಗೆ ಅರ್ಥವಾಗದಿದ್ದಾಗ ತಲೆ ತುರಿಕೆ ಬಂತು. ಅವರೇ ಅದಕ್ಕೆ ಅರ್ಥ ವಿವರಣೆ ಕೊಡಬೇಕಾಯಿತು. ಕಾರಣ,—ಅವು ಜ್ಯೋತಿಷ್ಯಕ್ಕೆ ಸಂಬಂಧಪಟ್ಟ ಪದ್ಯಗಳಾಗಿದ್ದುವು. ಅವರ ಪುತ್ರ ಪುತ್ರಿಯರ ಜಾತಕಗಳೂ ಅದರಲ್ಲಿ ಪದ್ಯಮಯವಾಗಿ ರಚಿಸಲ್ಪಟ್ಟಿದ್ದುವು.

* * * *

ಬಿಳಿಚುಕಲ್ಲಿನಲ್ಲಿ ಮಿಶ್ರಣ ಬಂಗಾರವನ್ನು ಸ್ಫುಟಗೊಳಿಸಿ ನಮ್ಮ ಉಪಯೋಗಕ್ಕೆ ತರಬೇಕೆಂದಾದ ಮೇಲೆ, ಮನುಷ್ಯ ಸಮಾಜವು ಸಾಧ್ಯವಾದಷ್ಟು ತನ್ನ ಧ್ಯೇಯವಿಹಿತವಾದ 'ಸಂಸ್ಕಾರ' ಮೂಸೆಯಲ್ಲಿ ಬೆಂದು ಅಪ್ಪಟ ಚಿನ್ನವಾಗಬೇಕು. ಬದುಕಿನ ಶಾಶ್ವತಸುಖದ ಸಂಪಾದನೆಗಾಗಿ ತಾನು 'ಸಂಸ್ಕಾರ'ದಿಂದ ಪರಿಶುದ್ಧನಾಗಬೇಕು. ಅದರಲ್ಲೇ ಸಜ್ಜನಿಕೆಯಿದೆ- ಕೋಮಲತೆಯಿದೆ. ಇಂತಹ ಸಂಸ್ಕೃತಿಯ ಸುಸ್ವರೂಪಗಳಿಗೆ ಕನ್ನಡಿ ಹಿಡಿಯುವ ಸಲುವಾಗಿ ಶ್ರೀಯುತ ಪುಣಿಂಚತ್ತಾಯರು ನಮ್ಮ ನಾಡಿನ ನಾರೀಮಣಿಯರ ಬಾಯಿಯಿಂದ ರಾಗ–ತಾಳ–ಲಯಬದ್ಧವಾದ ಹಾಡುಗಳನ್ನು ಸರಾಗವಾಗಿ ನುಡಿಸಲು ಯತ್ನಿಸಿದ್ದಾರೆ—ಶೋಭಾನೆಯಾಗಿ. ಹೆಮ್ಮಕ್ಕಳ ಗುರುತರದ ಜವಾಬ್ದಾರಿಯಲ್ಲಿ ಶಿಶುಪಾಲನೆ ಮುಖ್ಯವಾದುದೆ ಇದೆ. ಜೋಗುಳದ ಹಾಡು ಹಾಡುತ್ತಾ ತೊಟ್ಟಿಲು ತೂಗಿದಾಗ ಮಕ್ಕಳು ಸ್ವಸ್ಥಚಿತ್ತದಿಂದ ಲಾಲಿಸಿ ಪವಡಿಸುವರು. ಈ ಸಂಕಲನದಲ್ಲಿ ಬರುವ ಮೊದಲನೆಯ ಆಯ್ಕೆಯೇ ಅದು.

"ಉಯ್ಯಾಲೆಯೊಳು ಮೃದು-ಶಯ್ಯೆ ಮೇಲೊಳು ಮುದ್ದು-
ಮೈಯ್ಯ, ಮೂಲೋಕದ-ಮ್ಮಯ್ಯನ ಮಲಗಿಸಿ,.
ಜೋಗುಳ ಪಾಡಿದರು-ಮಾನಿನಿಯರು"

ಎಂದು ಹಾಡುತ್ತಾ, ತಾಯಿಯ ಕರುಳಿನ ಮಮತೆಯ ವಿದಿತವಾಗಿ-

ಪಸಿವುತ್ರಿಸೆಗೆ ವ್ಯಸನಿಸಬೇಡ ಬಹಳ,
ಪಸುಳೆ ಕೊಡುವೆ ದಿವ್ಯವಾದ ಮೊಲೆವಾಲ,
ಅಸುರ ಬಾಧೆಯು ಬಾರದಂತೆ ಧೂಪಿಸುವೆ.
ಗುಸುಗುಟ್ಟವೊರಗಿ ನಿದ್ರಿಸು ಮುದ್ದು ಮಗುವೆ!

ಎಂಬ ಮಮಕಾರದ ಮಾತೆಯ ಮನಸ್ಸನ್ನು ಒಳಹೊಕ್ಕಿ ನೋಡಿದ ಈ ಕವಿಹೃದಯವು-ಮಾತೆಯ ಹೃದಯದ ಅಭಿಲಾಷೆಯು ಪದಧ್ವನಿಯಾಗಿ ಹೊರಹೊಮ್ಮಿದೆ.

ಬಳೆದ ಮಗುವಿಗೆ ಅನ್ನಪ್ರಾಶನವಾಗಬೇಕು. ಈ ಅನ್ನಪ್ರಾಶನದಲ್ಲಿ ತಾಯಂದಿರು ಸಹಭಾಗಿನಿಯರು. ಮುತ್ತೈದೆಯಾದ ನಾರಿಯು, ಅನ್ನ ದಾಯಿನಿಯಾಗಿ ತನ್ನ ಮಗುವಿಗೆ ಅನ್ನ ಉಣ್ಣಿಸುವ ಈ ಹಾಡಿನಲ್ಲಿ ಭಾರತೀಯ ಸಂಸ್ಕೃತಿಯ ತತ್ವ ಪಡಿಯಚ್ಚಾಗಿ ಬಂದಿದೆ.

ಮಿತ್ರನಡಿಯ ಪ್ರಾರ್ಥಿಸುತ ಸಾ-ವಿತ್ರೀತುಲಸಿಯರ ನಮಿಸಿ,
ಬಾಳೆಹಣ್ಣು, ಬೆಲ್ಲ, ಜೇನು,-ಶಾಲ್ಯನ್ನದಧ್ಯಾಜ್ಯದೊಡನೆ
ಮುಗುಳು ನಗೆಯ ಮೊಗದ ಸಿರಿಯ-ಮಗಳನು ತೊಡೆಯೊಳಿರಿಸುತ
ಅನ್ನ ಕೊಡುವ ಅನ್ನದೇವ! ಅನ್ನವೆನಗೆ ಕೊಡುಪೂರ್ಣ.......॥

ಎಂಬೀ ಗೀತೆಯಲ್ಲಿ ಅನ್ನಪ್ರಾಶನದ ಕ್ರಿಯಾಂಗಗಳೇ ಚಿತ್ರಿತವಾಗಿವೆ. ಅವಸ್ಥಾಭೇದಗಳುಂಟಾಗುವಾಗ ಅದಕ್ಕನುಗುಣವಾಗಿ ಸಂಸ್ಕಾರಗಳನ್ನು ರೂಪೀಕರಿಸಿಕೊಳ್ಳುವುದು ಭಾರತೀಯ ಸಂಪ್ರದಾಯದ ಇನ್ನೊಂದು ವೈಶಿಷ್ಟ್ಯ. ಅಂತೆಯೇ ಆ ಕುರಿತು ವೈದಿಕವಿಧಾನದಲ್ಲಿ ಮಗುತನದಿಂದ ಹುಡುಗತನಕ್ಕೆ ಸಾಗುವ ತನ್ನ ಸುತನಿಗೆ ಪಿತನು, ಓಷಧಿಶಮಿಕುಶಗಳನ್ನು ಪ್ರಾರ್ಥಿಸಿ, ಕ್ಷೌರಕರ್ಮಾಂಗಗಳನ್ನು ಮಾಡಿಸಿ, ಮಗನನ್ನು ಮುಂದಿನ ಸಭ್ಯಸಮಾಜದ ವ್ರತಿಯನ್ನಾಗಿಸುವ ಸನ್ನಿವೇಶ ಚಿತ್ರಣವನ್ನು ಶ್ರೀಯುತರ ಚೌಲದ ಹಾಡಿ'ನಲ್ಲಿ ಕಾಣಬಹುದು.

ಯಾವುದೇ ಶುಭಕರ್ಮಗಳನ್ನು ಕೈಗೊಳ್ಳುವಾಗ, ಅದಕ್ಕಿಂತ ಹಿಂದಾಗಿ, ಶುಭವರ್ಣದ ಅರಸಿನ ಹುಡಿಯನ್ನು ಎಣ್ಣೆಯಲ್ಲಿ ಬೆರಿಸಿ, ಹಚ್ಚಿ,

ತೈಲಾಭ್ಯಂಜನ ಮಾಡುವುದೊಂದು ಪದ್ಧತಿ. ಆರೋಗ್ಯದಾಯಕವೂ ಮಂಗಳ ಪ್ರದವೂ ಆದ ಆ ಪದ್ಧತಿಯನ್ನೇ ಗುರಿಯಾಗಿಟ್ಟುಕೊಂಡು ಶ್ರೀಯುತರು ಸುವ್ವಾಲೆ ದಾಟಿಯಲ್ಲಿ ಬರೆದ 'ಅರಸಿನೆಂಣೆ' ಹಾಡು ಎಷ್ಟೊಂದು ಚೊಕ್ಕವಾಗಿದೆ ನೋಡಿರಿ.

ಮಣಿಮಯದ ಮಣೆಗೆ ನೂ-ತನ ವಸನವನು ಹಾಸಿ,
ಧ್ವನಿಯೆತ್ತಿ ಗೀತಶೋಭನ ಪಾಡುತ
ಚಂದದಲಿ ಹರಿಯ ಕರೆತಂದು ಕುಳ್ಳಿರಿಸಿ ಮುಡ-
ದಿಂದಲಕ್ಷತೆ ಹಾಕಿದರು ಸತಿಯರು
.......ಹರಿಣಾಕ್ಷಿಯರು ನೆರೆದು ಹರುಷದಲಿ ಹಚ್ಚಿದರು
ಹರಿಗೆ ಅರಸಿನ ಚೂರ್ಣ-ಬೆರೆತೆಣ್ಣೆಯ ॥

ಅಲ್ಲದೆ ಶ್ರೀಯುತರ 'ಉಪನಯನ'ದ ಹಾಡಿನ ಪ್ರತಿಯೊಂದು ಪದ್ಯಗಳೂ, ನಮ್ಮ ಪ್ರಾಚೀನ ವೈದಿಕ ಸಂಸ್ಕೃತಿಗಳ ಸವಿಾಕ್ಷೆಯನ್ನೇ ಮುಂದಾಗಿಟ್ಟುಕೊಂಡು ರಚಿಸಿದವುಗಳಾಗಿವೆ.

ಅದಕ್ಕಿಂತ ಮತ್ತಿನ 'ಸಮಾವರ್ತನೆ'ಯ ಹಾಡಿನಲ್ಲಿ ಗುರುಶಿಷ್ಯರ ಪರಸ್ಪರ ವಿಯೋಗಕ್ಕೆ ಪೂರ್ವಭಾವಿಯಾದ ಕೊನೆಯ ಮಿಲನದ ಸನ್ನಿವೇಶ ಚಿತ್ರಿತವಾಗಿದೆ.

"ಏನನಿಚ್ಛಿಸುವೆ? ಮಾನ್ಯ ಶ್ರೀಗುರುವೆ!
ನ್ಯೂನವಿಲ್ಲದೆಲ್ಲವನೊದಗಿಸುವೆ
ಮಾನಸದೊಳಗನುಮಾನವನಿಡದೆ,
ನೀನರುಹೆನ್ನೊಳು ಕರಗಳ ಮುಗಿವೆ" ॥ ೧ ॥

ಎಂಬ ಶಿಷ್ಯನ ಕೇಳಿಕೆಗೆ ಉತ್ತರವಾಗಿ,
ಲೇಸ ನುಡಿದೆ ನೀನಾಶೆಗಳೇನಿದೆ?
ಕ್ಲೇಶವಿಡದೆ ಸೇವೆಯನೀ ವರೆಗೆ
ದೋಷವಿಲ್ಲದಾಚರಿಸಿದ ಬಗೆಗೆ
ತೋಷಗೊಂಡೆ ನಿನ್ನತಿಶಯಗುಣಕೆ ॥ ೨ ॥

ಎಂಬ ಉದಾರಹೃದಯದ ಗುರುವಿನ ಮಾತು ಹೃದಯಂಗಮವಾಗಿದೆ. ವಿದ್ಯಾವ್ಯಾಸಂಗದ ಪರಿಪೂರ್ಣತೆಯು ವಿಶ್ವವಿದ್ಯಾನಿಲಯದ ಪದವಿಗಳಿಂದಲ್ಲ-ಗುರುವಿನ ಮನಸ್ತುಷ್ಟಿಯಿಂದ! ಆ ಮೇಲೆ ಎರಡನೆಯ

ಭಾಗದಲ್ಲಿ ಬರುವ ಶ್ರೀಯುತರ ವಿವಾಹ ಸಂಬಂಧದ ಹಾಡುಗಳಲ್ಲಿ ಹೆಚ್ಚಿನವೂ ನಮ್ಮ ಸೀಮೆಯಲ್ಲಿ ಪ್ರಸಿದ್ಧಿ ಪಡೆದವುಗಳೇ ಆಗಿವೆ. ಅವುಗಳಲ್ಲಿ ಹೆಮ್ಮಕ್ಕಳು ತಾ ಮುಂದೆ ತಾ ಮುಂದೆಂದು ಹಾಡುವುದು-ದಿಬ್ಬಣಿಗರಹಾಡು. ಅಲ್ಲದೆ, ಉಪಚಾರೋಕ್ತಿಗಳಿಂದ ಪ್ರಾರಂಭಿಸಿದ ಈ ರೀತಿಯ ಹಾಡುಗಳು ವಧೂವರರು ಅನ್ಯೋನ್ಯ ಹೂಮಾಲೆಗಳನ್ನು ಹಾಕಿಕೊಂಡು ಎರಿಸುವಾಗ, ಮದುವಣಿಗನನ್ನು ಧಾರೆ ಮಂಟಪಕ್ಕೆ ಕರೆದಾಗ, ಹಾಗೆಯೇ ಹಸೆಗೆ ಕರೆಯುವಾಗ—ಈ ಪ್ರತಿಯೊಂದು ಸನ್ನಿವೇಶಗಳಲ್ಲೂ ತುಂಬಾ ಔಚಿತ್ಯಪೂರ್ಣಗಳೆನಿಸಿವೆ.

ಇನ್ನು ವಧುವನ್ನು ವರನ ಕಡೆಗೊಪ್ಪಿಸಿದಾಗ,—ವಧುವಿನ ತಂದೆ ತಾಯಿಗಳ ಮರ್ಮಸ್ಪರ್ಶೀ ಸನ್ನಿವೇಶವನ್ನು ಚಿತ್ರಿಸುವ—

ಪುತ್ರನಂದದಿ ಸಲಹುತೀ ದಿನ ಶಾಸ್ತ್ರ ಮಂತ್ರ ವಿಧಾನಪೂರ್ವಕ ।
ದತ್ತಮಾಡಿದೆ ನಿನಗೆ ನಾ ಧರ್ಮಾರ್ಥಕಾಮಗಳನುಸರಿಸೆನುತ ॥
ದಾನಮಾಡಿದನು—ಜನಕನು ಕನ್ಯಾ—ದಾನಮಾಡಿದನು

ಈ ಹಾಡೂ ತುಂಬಾ ಹೃದಯಸ್ಪರ್ಶಿಯೇ ಆಗಿದೆ. ಶ್ರೀಯುತರು ಶಬ್ದಾಲಂಕಾರ—ಅರ್ಥಾಲಂಕಾರಗಳಲ್ಲಿಯೂ ತುಂಬಾ ಮುಂದುವರಿದಿದ್ದಾರೆ. ದಿಬ್ಬಣಿಗರ ಚರ್ಚೆಯ ಹಾಡಿನಲ್ಲಿ.

ಕುಟಿಲತನದಿ ಕೊಲೆ ಘಟಿಸಲು ಬಗೆದ
ಭಟರ ಜಯಿಸಲುತ್ಕಟ ತಪಗೈದ,
ಪಟುಫಲ್ಗುಣಸಿಗೆ ಕಿಟಿಯ ನೆವನದಿ
ಸ್ಫುಟದಿ ಶರವಕೊಟ್ಟ ನಿಟಿಲನಯನ ಧೂ—
ರ್ಜಟಿಯ ನೋಡಮ್ಮ ಅಳಿಯನ ॥

ಎಂಬುದಕ್ಕೆ ವಧುವಿನ ಕಡೆಯವರು ಮೂದಲಿಸುತ್ತಾ ವ್ಯಾಜೋಕ್ತಿಯಿಂದ—

ನೆತ್ತಿಯ ಮೇಲೆ ವಿಷ—ಕುತ್ತಿಗೆಯೊಳು ವಿಷ
ಎತ್ತಿನ ಬೆನ್ನಡರಿ ಸುತ್ತ—ಸುತ್ತುವನ
ಮಿತ್ರೆ ನೋಡುವದಿಂದು ಚಿತ್ರವೇನೆ?

ಎಂಬೀ ರೀತಿಯ ಹಲವಾರು ಕವನಗಳು ಶ್ರೀಯುತರ ಕವಿಚಮತ್ಕೃತಿಗೆ ಉದಾಹರಣೆಯಾಗಿ, ಸುವ್ವಾಲೆಯ ಮೋಡಿಗೆ ಅತಿ ಸುಂದರವೆನಿಸಿವೆ.

ಶುಭಕರ್ಮಗಳ ಕೊನೆಗೆ ಹಾರೈಕೆಯಾಗಿ ಮಂಗಳಗೀತೆಯನ್ನು ಹಾಡಿ ಹರಸುತ್ತಾರೆ–ಮಂಗಳಾರತಿಯನ್ನೆತ್ತಿ, ಕರ್ಮಾಂಗದ ಮೇಲೆ ಬೆಳಕು ಚೆಲ್ಲುತ್ತಾರೆ. ಈ ಬೆಳಕಿನ ಮಂಗಳ ಗೀತೆಗಳು ಪುಣಿಂಚತ್ತಾಯರ ಶೈಲಿಯಲ್ಲಿ ವಿಶಿಷ್ಟವೆನಿಸಿ ಹೊರಹೊಮ್ಮಿವೆ.

ಮುಡಿಗೆ ಮುಡಿದ ಪೂ–ಗುಡಿಗಳವಡುವಾ–
ರಡಿಗಳ ನಿಡುದನಿವಿಡಿದು ಶೋಭನವಾ
ಬಿಡದುರೆ ಪಾಡುವ ಮುಡಿವೊಲೆಯರು ಸಿರಿ–
ಗೊಡೆಯಗಾರತಿಯಾ ಬೆಳಗಿರೆ ||

* * * *

ಆಪಾತತಃ ನೋಡಿದರೆ ಈ ಸಾಹಿತ್ಯದ ಸುಂದರತೆಯು ಅರಿವಾಗದು. ಒಳಹೊಕ್ಕು ಅರ್ಥಮಾಡಿದಾಗ ಇದು ರುಚಿಕರ. –ಹಾಗೂ ಮನೋಹರ! ಇದರಲ್ಲಿರುವ ಹೆಚ್ಚಿನ ಹಾಡುಗಳೂ ನಮ್ಮ ವೈದಿಕ ತತ್ತ್ವನಿರೂಪಣೆಗಳ ಪ್ರತೀಕವೆನಿಸಿ, ಭಾರತೀಯ ಸಂಸ್ಕೃತಿಗೆ ಹಿರಿಮೆಯೆನಿಸಿ. ಬಾಳಬಲ್ಲ ಉತ್ಕೃಷ್ಟ ಸಾಹಿತ್ಯರಚನೆಯೆಂಬುದರಲ್ಲಿ ಸಂದೇಹವಿಲ್ಲ. ಈ ರೀತಿಯ ಸುವ್ವಾಲೆ ಹಾಡುಗಳು ಸಮಾಜದ ಕಟ್ಟುಕಟ್ಟಳೆಗೆ ಮಾತ್ರವಲ್ಲ, ಹೆಮ್ಮಕ್ಕಳ ಮನಸ್ಸಿಗೆ ಹುರುಪು ನೀಡುವ ಗೀತಾವಲ್ಲರಿಗಳೂ ಆಗಿವೆ.

ಶ್ರೀದಾಮೋದರ ಪುಣಿಂಚತ್ತಾಯರು ವೈದಿಕಕರ್ಮಾಂಗಗಳನ್ನು ಕಲಿತುದು ಮಾತ್ರವಲ್ಲ, ವೇದದೊಂದಿಗೆ–ಜ್ಯೋತಿಷ್ಯ ಆಯುರ್ವೇದ, ಇತ್ಯಾದಿಯಾಗಿ–ವೇದಾಂಗಗಳನ್ನೂ ಯಥಾಮತಿಯಾಗಿ ಬಲ್ಲವರಾಗಿದ್ದಾರೆ. ಹಿಂದಿನ ಕಾಲದಲ್ಲಿ ಒಬ್ಬ ಪಂಡಿತನೆನಿಸಿಕೊಳ್ಳಬೇಕಾದಲ್ಲಿ ಅವನು ಷಟ್ ಶಾಸ್ತ್ರಗಳನ್ನೂ ತಿಳಿದಿರಬೇಕು. ಇಂತಹ ತಿಳಿವಿನವರನ್ನೇ ಪಂಡಿತರೆಂದು ಒಪ್ಪಿಕೊಳ್ಳುತ್ತಿದ್ದರು. ಈ ರೀತಿಯ ಪಾಂಡಿತ್ಯವನ್ನು ಸಂಪಾದಿಸಿಕೊಂಡವರಲ್ಲಿ ಇವರು ಒಬ್ಬರು. ಮಾತುಮಾತಿಗೆ ನಗಿಸುವ ಕಲೆ ಇವರ ಮಾತುಗಳಲ್ಲಡಗಿದೆ. ಇವರಲ್ಲಿ ಮಾತಾಡಿದವರಿಗೆ ಆ ಗುಟ್ಟಿನ ಅರಿವಾದೀತು. ಮಾತಿನ ಚಮತ್ಕೃತಿ ಇವರ ಜನ್ಮಸಿದ್ಧ ಹಕ್ಕು–ಅರ್ಪೇಯಗುಣ.

ಇಂತಹ ಕವಿವರರ 'ಕೃತಿದರ್ಶನ'ದ ಭಾರವನ್ನು ಪೂರ್ಣವಿಳಿಸಲು ಈ ಚಿಕ್ಕ ಪರಿಚಯ ಲೇಖನದಲ್ಲಿ ಅಸಾಧ್ಯ. ನನ್ನಿಂದ ಸಾಧ್ಯವಾದ ಮಟ್ಟಿಗೆ ಇದಕ್ಕೆ ಕನ್ನಡಿಹಿಡಿದು ತೋರಿಸಿದ್ದೇನೆ. ಆಳವಾಗಿ ನೋಡಿ ನಿಮಗೆ ಮನಬಂದಂತೆ ಇದರ ಸೌರಭವನ್ನು ಆಘ್ರಾಣಿಸಿ, ಕೃತಿಯ ಕೃತಾರ್ಥತೆಯನ್ನು ಹಾರೈಸುವ ಭಾರ ನಿಮಗೆ ಮೀಸಲು.

—V. B, VARKADI


ಅನುಕ್ರಮಣಿಕೆ

ತಿದ್ದುಪಡಿ

ಪುಟ	ಪಂಕ್ತಿ	ತಪ್ಪು	ಒಪ್ಪು
11	9	ಪೂಗಗ	ಪೂಗ
15		ಇಲ್ಲಿ 3ನೆಯ ಪದ್ಯದ ನಂತರದ ಪದ್ಯಗಳನ್ನು — ಈ ಕ್ರಮದಿಂದ ಓದಬೇಕು.	

"ಛತ್ರ ಹೇಮಮಣಿ ... ॥ ೪ ॥ ವ್ರತಲೋಪ ... ॥ ೫ ॥
ಕೇಶನಖಾದಿ ... ॥ ೬ ॥ ಜನನಿ ಕಣ್ಣಿಗಂಜನ ... ॥ ೭ ॥
ಭೂವಿಬಾಧ ... ॥ ೮ ॥ ಏರಿಸುನಾ ... ॥ ೯ ॥
ಸಮಾವರ್ತನೆಯ .... ॥ ೧೦ ॥

ಪುಟ	ಪಂಕ್ತಿ	ತಪ್ಪು	ಒಪ್ಪು
17	11	ಎಲೇ	ಎಲೆ!
33	3	ಪುತ್ರಿಯು ಮೃತ	ಪುತ್ರಿಯುಮೃತ
33	6	ರಾವಳ	ರಾವಣ
33	25	ಘೂತಿಸಿದ	ಘಾತಿಸಿದ
40	[illegible]	ಡೂಡತಿಗೆ	ದೊಡತಿಗೆ



ಶ್ರೀ ದಾಮೋದರ ಪುಣಿಂಚತ್ತಾಯ

ಪ್ರಾರ್ಥನೆ

ಪ್ರಾರಂಭದಿ ಪ್ರಾರ್ಥಿಸುವೆನು । ಹೇರಂಬನೆ! ಹೃದಿ ನಿನ್ನನು
ಮಾರಾರಿಕುಮಾರಾರಿವಿ । ದಾರಣ ಗಜವದನ!
ಗೌರೀದಾರಕ! ವೀರಕು । ಮಾರಾಗ್ರಜ ಧೃತಬೀಜಾ ।
ಪೂರಾದ್ಯಾಯುಧ! ದಶಭುಜಧೀರನೆ! ಗಣರಾಜ ॥ ೧ ॥

ಪ್ರತ್ಯೂಹನಿಕರಹರ! ಪ್ರ । ಶಸ್ತಗುಣಾರ್ಣವ ದೇವ ಸ-
ಮಸ್ತಾಮರ್ತ್ಯಜನಾರ್ಚಿತ । ನಿತ್ಯೋತ್ತಮಚರಿತ ।
ಪ್ರತ್ಯಕ್ಷ ಫಲಪ್ರದ! ಕೃಪೆ । ಯಿತ್ತೀ ಕರ್ಮವನೆಲ್ಲವ
ಪೂರ್ತಿಸೈ. ಪ್ರಣಿಪತಿಪೆನು । ಪ್ರತ್ಯಹದೊಳು ನೆನೆವೆ ॥ ೨ ॥

ದೃಢಮನದೊಳು ಬಡಿಸುವೆ ವಡೆ । ಕಡಲೆಗಳನು ಭುಂಜಿಸು ಜಗ
ದೊಡೆಯನೆ ನಿನ್ನಡಿಗೆರಗುವೆ ಬಡವರ ಕೈಬಿಡದೆ ॥
ತೊಡಗಿದ ಶುಭಕೆಡರಿಲ್ಲದೆ । ಕಡೆಗೊಳುವಂತಿಡು ತನ್ನೊಳು
ಕಡುಕೃಪೆಯನು ಬೇಡುವೆ ನಾ । ನಡಿಗಡಿಗೆನ್ನೊಡೆಯ ॥ ೩ ॥

ಸಂಭಾವಿಪೆ ಶಾಂಭವೀಶ । ಸಂಭೂತಾದ್ಭುತ ಭೂತಕ-
ದಂಬನತಪದಾಂಭೋರುಹ । ಲಂಬೋದರ ಗಣಪ ।
ನಂಬಿಹೆನೆಂಬರಿಗಿಂಬ ವಿ । ಲಂಬಿಸದೆ ದಿನಂಬಿಡದ-
ತ್ರಂಬೆಯ ಗುಣಮಂ ಬೆಳೆಸಿದ । ಕುಂಭಿಮುಖ ಗಣೇಶ ॥ ೪ ॥

ಕರುಣಿಸು! ಹಿಮಕಿರಣಕಲಾಭರಣನೆ ತವ ಚರಣಾಬ್ಜ
ಸ್ಮರಣೆಯ ಪರಿಯರಿಯೆನು. ನಿಜಶರಣ ಕುಲೋದ್ಧರಣ ॥
ದುರಿತಗಿರಿಭಿದುರ! ಗುಹಸೋ । ದರ ಸುಂದರ ರುಧಿರಾಂಬರ
ಪರಿಪಾಲಯ ನತದಾಮೋ । ದರ ಮಧುಪುರದರಸ ॥ ೫ ॥

ಜೋಗುಳ

[ಗಂಡು ಮಗುವಿನ ಜೋಗುಳ]

॥ ಅಷ್ಟತಾಳ ॥ ದಾಟಿ:-ಬಾರೋ ಬಾರೋ ಮುರಳೀಧರಕೃಷ್ಣ— ಎಂಬಂತೆ

ಜೋ ಜೋ ಮಧುಸೂ-ದನ ಮೋ-ಹನ ಬಾಲ ।
ಜೋ ಜೋ ಯದುಕುಲ-ತಿಲಕ ಸುಶೀಲ ॥

ಅಸುರಾ-ಳಿಯ ಪೀ-ಡೆಯ ನಿ-ಲ್ಲಿಸಲೆಂದೆ ।
ವಸುದೇ-ವಗೆ ದೇ-ವಕಿಯೊಳು-ಜನಿಸಿದೆ ॥

ಅತಿಶೋ-ಕಿಸುವಾ-ತಾಯ್ತಂ-ದೆಯರಿಗೆ ।
ಸುತನಾ-ಗುತೆ ತೋ-ರಿದೆ ದಿ-ವ್ಯಾತ್ಮವ ॥

ಜನನಾ-ದ್ವಶ, ದ್ವಾ-ದಶ, ಷೋ-ಡಶ ಶುಭ ।
ದಿನ ಶೋ-ಭನ ತಾ-ರೆಯೊಳು ತೊ-ಟ್ಟಿಲೊಳಿಡೆ ॥

ಉರಗೇಂ-ದ್ರನ ಮೈ-ಯೊಳು ನಿ-ದ್ರಿಸುವಂತೆ ।
ಪರಿಪೂ-ರ್ಣಾನಂ-ದವ ಪೊಂ-ದಿರು ಮುಂದೆ ॥

ಪ್ರಲಯಾ-ಬ್ಧಿಯೊಳಾ-ಲದ ಪ-ರ್ಣದ ಮೇಲೆ ।
ಚೆಲುವಾ-ಗಿಹ ಬಾ-ಲಕನಂ-ದದಿ ಬಾಳ್ವೆ ॥

ಭವರೋ-ಗಕೆ ಭೇ-ಷಜ, ನಿ-ನ್ನಯ-ನಾಮ ।
ಭುವನೇ-ಶ್ವರ! ಭ-ಕ್ತರ ದೇ-ವದ್ರುಮ ॥

ಕುಟಿಲಾ-ಳಕ ಕುಂ-ಡಲ ಮಂ-ಡಿತಕರ್ಣ ।
ಕಟಿಶೋ-ಭಿತಮೇ-ಖಲ ಶ್ಯಾ-ಮಲವರ್ಣ ॥

ಜೋ ॥ ಜೋ ॥

[ಹೆಣ್ಣು ಮಗುವಿನ ಜೋಗುಳ]

॥ ಅಷ್ಟತಾಳ ॥ ದಾಟಿ:-ಮಾತಾಡಬಾರದೇನೋ— ಎಂಬಂತೆ ॥

ಜೋಗುಳ ಪಾಡಿದ್ದರು — ಮಾನಿನಿಯರು ।
ಜೋಗುಳ ಪಾಡಿದ್ದರು ॥

ಜೋಗುಳವನು ಚೆಲ್ವ । ರಾಗ ತಾಳದೊಳನು ।
ರಾಗದಿಂದಲೆ ಮಂದ್ಸ। ನಾಗುತ ತೂಗುತ ॥

ಉಯ್ಯಾಲೆಯೊಳು ಮೃದು । ಶಯ್ಯೆಮೇಲೊಳು ಮುದ್ದು ।
ಮೈಯ್ಯ ಮೂಲೋಕದ-ಮ್ಮಯ್ಯನ ಮಲಗಿಸಿ ॥ ೨ ॥

ಸರ್ವದಾನವ ಕುಲ । ಗರ್ವ ಭಂಗಿಸಲೆಂದು ।
ನಿರ್ವ ಕೈಮುಷ್ಟಿಯು । ತೋರ್ವ ಬಾಲೆಯು ನಿಟ್ಟು ॥ ೩ ॥

ಶ್ರೋತ್ರಾಂತಾಯುತ ನೀಲ ! ನೇತ್ರೆಯಾಖಿಲ ಸ್ತೋತ್ರ ।
ಪಾತ್ರೆಯು ಪರಮ ಪ । ವಿತ್ರೆಯು ನೋಡುತ ॥ ೪ ॥

ಗೋತ್ರೇಶ ಸುತೆ! ಜೋ! ಗಾ । ಯತ್ರಿಯೆ! ಜೋ ಜೋ ।
ಮಿತ್ರಾಗ್ನಿವಿಧುನಯ । ನತ್ರಯೆ ಜೋ ಜೋ ॥ ೫ ॥

ರವಿಯಂತೆ ಪ್ರಭೆಯಾಗು । ಸವಿನುಡಿಯುವಳಾಗು ।
ಶಿವಗೆ ವಲ್ಲಭೆಯಾಗು । ಶಿವೆಯಾಗಿ ಬಾಳೆಂದು ॥ ೬ ॥

॥ ಅಷ್ಟತಾಳ ॥ ದಾಟಿ:-ಬಂಟನಾಗಿ ಬಾಗಿಲ ಕಾಯ್ವೆ — ಎಂಬಂತೆ ॥

ಗುರುಗಣೇಶ್ವರ ಗೌರಿ । ಸಿರಿವಾಣಿಯರಿಗೆ
ಶಿರಬಾಗಿ ಶಿಶುವನಿಡುವೆ ತೊಟ್ಟಿಲೊಳಗೆ ॥ ಜೋ ಜೋ ॥

ಮಾತಾಪಿತರ ರಕ್ತರೇತಸ್ಸಂಬಂಧ
ಜಾತವಾಗಿಹ ದೇಹಯಾತನೆಯಿಂದ ।
ಯಾತಕೆ ಮರುಗುವೆ ಬರಿದೆ ನೀ ಶಿಶುವೆ!
ಪ್ರೀತಿಯಿಂದಲಿ ನಿನ್ನ ತೂಗುವೆ ಮಗುವೆ ॥ ಜೋ ಜೋ ॥

ತಳಿರಂತಿರುವ ಪಾದತಲಗಳಿಂದೆಸೆವ,
ತಲೆಯೊಳ್ ತುಂಬಿಯ ನಿರ್ವಸುಳಿಗೂದಲಿರುವ ।
ನಳಿನದೆಸಳ ಪೋಲ್ವ ನಯನದೆ ಮೆರೆವ,
ಲಲಿತಾಂಗಿ! ತೂಗಿ ಪಾಡುವೆನು. ಶೋಭನವ ॥

ಹಸಿವು ತ್ರಿಸೆಗೆ ವ್ಯಸನಿಸಬೇಡ ಬಹಳ
ಪಸುಳೆ! ಕೊಡುವೆ. ದಿವ್ಯವಾದ ಮೊಲೆವಾಲ ।

ಅಸುಗಬಾಧೆಯು ಬಾರದಂತೆ ಧೂಪಿಸುವೆ
ಗುಸುಗುಟ್ಟದೊರಗಿ ನಿದ್ರಿಸು ಮುದ್ದು ಮಗುವೆ ! ॥

ಜನನೀಜನಕ ಬಂಧು ಜನರಿಗಾನಂದ–
ಜನಕವಾಗುವ ಶೀಲಗುಣಬುದ್ಧಿಯಿಂದ ।
ದಿನದಿನಕಭಿವೃದ್ಧಿಯನು ಪೊಂದಿ ಬಾಳು !
ದನುಜಾರಿ ಕೃಷ್ಣ ಕಾಯಲಿ ಕಾರುಣ್ಯದೊಳು ॥

ಪತಿವ್ರತೆಯರ ಕುಲಗುರುವಾಗು ವಿಮಲೆ !
ಜೊತೆಗೂಡದಿರು ದುಷ್ಟಸತಿಯರೊಳಬಲೆ ! ।
ಜತನದಿ ಗೃಹಕೃತ್ಯಗಳ ಮಾಡು ಮಗಳೆ !
ಪತಿಸೇವೆಯಲಿ ಶ್ರದ್ಧಾಯುತಳಾಗು ಬಾಲೆ ! ॥

ಕುಲಜನಾಗಿರುವ ಶ್ರೀಯುತನ ಕೈವಿಡಿದು
ಕುಲದುದ್ಧಾರಕ ಪುತ್ರ ತಿಲಕನ ಪಡೆದು ।
ಕುಲವೆರಡರ ಕೀರ್ತಿ ಬೆಳಗಿಸು ನಮ್ಮ
ಕುಲಧರ್ಮವನು ಬಿಟ್ಟು ನಡೆಯದಿರಮ್ಮ ॥

ಖರಕರನುದಯದ ಮೊದಲೆದ್ದು ಮುದದಿ
ಕರಚರಣಂಗಳ ತೊಳೆದು ಮಾನಸದಿ
ಹರಿಯ ನೆನೆದು ಮಾಡು ದಿನಕೃತ್ಯಗಳನು
ಕರುಣದಿ ಕಾವ ಶ್ರೀಧರ ಬಾಮೋದರನು ॥

•••○O○•••

ಕ್ಷೀರಪಾನ

[ಗಂಡು ಮಗುವಿಗೆ ಹಾಲು ಕೊಡುವ ಹಾಡು]

॥ ರೂಪಕತಾಳ ।

ಪಾಲನಿತ್ತರಿಲ್ಲರಾ ಗೋ–
ಪಾಲ ಬಾಲಕೃಷ್ಣಗೆ ।
ಪಾಲ ಕಡಲ ಮನೆಯ ಲಕ್ಷ್ಮಿವಿಾ–
ಲೋಲ, ಲೋಕದೊಡೆಯಗೆ ॥ ॥ ೧ ॥

ಅಳಿಯರನ್ನು ಕರೆಯೆ, ಕಂಸ । ಕಳುಹೆ, ಬಂದ-ಶರಣಗೆ ।
ಜಲದೊಳೊಲಿದು ವಿಶ್ವರೂಪ । ದೊಲವ ತೋರಿ ಪೊರೆದಗೆ ॥ ೨ ॥

ಬಾಯ ತೆರೆದು ಸಕಲ ಜಗವ
ತಾಯಿಗಾಗಿ ತೋರಿದ ।
ಮಾಯೆ ಪೂತನೀಯ ಕೊಂದ
ಮಾಯಿ ಶೇಷಶಾಯಿಗೆ ॥ ॥ ೩ ॥

ಬಂಧನದಲಿ ನೊಂದ ತಾಯಿ । ತಂದೆಗಳನು ಸಲಹಲು ।
ಕಂದನಾಗಿ ಬಂದ ಶ್ರೀ ಮು । ಕುಂದ ಸುಂದರಾಂಗಗೆ ॥ ೪ ॥

ಭಾರಿ ಮಳೆಗೆ ಮರುಗಿ ಗೋಪ–
ವಾರ ಮೊರೆಯಿಡಲು ದಯೆಯ
ದೋರಿ, ಗಿರಿಯನೆತ್ತಿ ಪೊರೆದ
ಶೌರಿ ಶ್ರೀನಿವಾಸಗೆ ॥ ॥ ೫ ॥

[ಹೆಣ್ಣು ಮಗುವಿಗೆ ಹಾಲು ಕೊಡುವ ಹಾಡು]

॥ ಅಷ್ಟತಾಳ ॥

ಪಾಲ ಕುಡಿಸಿದರು । ಬಾಲೆಗೆ ತನಿ । ಪಾಲ ಕುಡಿಸಿದರು । ಪಲ್ಲ ॥
ಪಾಲ ಕಡಲಿನೊಳುದಿಸಿ ನಿರ್ಜರ–
ರಾಲಯದಿ ನೆಲೆಯಾದ ಗೋವಿನ ॥ ಅನುಪಲ್ಲ ॥

ತಂದೆ ತಾಯಿಗಳು । ಮೊದಲುಗೊಂಡು । ಬಂಧುಬಾಂಧವರು ।
ಕಂದಳನು ಕಣ್ಣಿಂದ ಕಂಡಾ–
ನಂದಿಸುವ ಫಲವೊಂದು ದೊರೆತುದು ॥
ಮುಂದೆ ನಿರಯಗಳಿಂದ ಪಿತೃಗಳು
ಸುಂದರುತ್ತಮ ಪದವಿಗೆನ್ನುತ ॥ ॥ ೧ ॥

ಸತ್ಯ ಮಾರ್ಗದಲಿ । ಚಿತ್ತವನಿರಿ । ಸುತ್ತ ದೇವರಲಿ
ಭಕ್ತಿಯನು ಸಂಗಡಿಸಿ ಸದ್ಗುಣ ।
ವೃತ್ತಿಯಲಿ ಕೀರ್ತಿಯನು ಬೆಳಗುವ ॥

ಶಕ್ತಿ ಸಂತತಿ ಸಂಪದಂಗಳು
ನಿತ್ಯ ಮಗು! ನಿನಗಾಗಲೆನ್ನುತ ॥ ॥ ೨ ॥

ಜ್ಯೋತಿಷೋತ್ತಮರು । ಪೇಳಿದ ಸುಮುಹೂರ್ತ ಲಗ್ನದೊಳು ॥
ಗೀತಘೋಷವು ಮೊಳಗೆ ಜೀವ
ವ್ರಾತಕಸುದಿನ ಮುಖ್ಯಜೀವನ ॥
ಹೇತು ಮಧುರಾದ್ಯಖಿಳ ಗುಣಪರಿ
ಪೂತವಾದ ಸುಧಾಸಮಾನದ ॥ ॥ ೩ ॥

ಅನ್ನಪ್ರಾಶನ

[ಗಂಡು ಮಗುವಿಗೆ]

॥ ಆದಿತಾಳ ॥ ದಾಟಿ:—ನೀರೆ ತೋರೆ ನಾರಿಜಾಕ್ಷನ— ಎಂಬಂತೆ ॥

ಪ್ರಾಶನವ ಗೈದರು - ಬಾಲನಿಗನ್ನ । ಪ್ರಾಶನವ ಗೈದರು ।
ದೋಷರಹಿತ ಪೀ । ಯೂಷ ಯೋಗದೊಳನ್ನ ॥ ಪ್ರಾಶನ....॥

ಮಂಗಲಕಾರ್ಯಕ್ಕೆ ವಿಘ್ನಂಗಳು । ಮುಂಗಾಣದಂತೆ ಆರಂಭದೊಳು ।
ಸಾಂಗದಿ ವಿಘ್ನೇಶನಂಘ್ರಿಗೆರಗಿ, ಅನ್ನ ॥ ಪ್ರಾಶನ ॥ ॥ ೧ ॥

ಬಾಲಗ್ರಹಾದಿ ದುರ್ಬಾಧೆಗಳ । ಕೀಲಿಸಿ ಖೇಟಂಗಳನುಕೂಲ ।
ಮೇಲಾಗೆ ಜಾತಕರ್ಮವ ಮಾಡಿಸುತನ್ನ ॥ ಪ್ರಾಶನ ॥ ॥ ೨ ॥

ಪುಟ್ಟಿರ್ದ ಮಾಸಾಭಿಧಾನವನು । ಸೃಷ್ಟಿಯು ವ್ಯವಹಾರನಾಮವನು ।
ಇಷ್ಟದೇವತೆಗಳಿಗನುಸಾರ ಪೆಸರಿಟ್ಟು ॥ ಪ್ರಾಶನ ॥ ॥ ೩ ॥

ನಾಂದಿ ಪುಣ್ಯಾಹಂಗಳಾಚರಿಸಿ । ಚಂದದಿ ಕಂದನ ಸಿಂಗರಿಸಿ ।
ದುಂದುಭಿಶಂಖಮೃದಂಗಘೋಷಗಳಿಂದ ॥ ಪ್ರಾಶನ ॥ ॥ ೪ ॥

ಭೂರಿ ಪುಷ್ಪಂಗಳು, ತೋರಣವು । ವಾರಿಯಿಂ ತುಂಬಿದ ಕುಂಭಂಗಳು ।
ಸೇರಿರ್ಪ ಮಂಟಪ ಮಧ್ಯಕೆ ಸಾರುತ ॥ ಪ್ರಾಶನ ॥ ॥ ೫ ॥

ಸೂನುವ ಧಾನ್ಯದ ಮೇಲಿರಿಸಿ । ಭಾನುವ ನೋಡಿ ನಮಸ್ಕರಿಸಿ ॥
ಕ್ಷೋಣಿದೇವರ್ಕಳು ಸೇಚನ ಮಾಡಲು ॥ ಪ್ರಾಶನ ॥ ॥ ೬ ॥

ಬಾಲನಿಗಾಯುಃರಾರೋಗ್ಯಂಗಳು । ಮೇಲಾದ ಭಾಗ್ಯಾನುಕೂಲಂಗಳು ।
ಹಾಳಾಗದೆಲ್ಲ ಕಾಲಂಗಳಲಿರಲನ್ನ ॥ ಪ್ರಾಶನ ॥ ॥ ೭ ॥

ತಂದೆ ತಾಯುಂದಿರು ಮುಂದಾಗಿಯು । ಬಂಧುಗಳೆಲ್ಲರು ಹಿಂದಾಗಿಯು ।
ಕಂದನು ಸೌಖ್ಯವ ಹೊಂದಿ ಜೀವಿಸಲೆಂದು ॥ ಪ್ರಾಶನ ॥ ॥ ೮ ॥

ಬಾಲ ಗೋಪಾಲರ ಮೇಳದಿಂದ । ಪಾಲು ಬೆಣ್ಣೆಗಳನ್ನು ಕದ್ದು ತಿಂದ ।
ಲೀಲಾವತಾರ ತವಮಾಲ ಶ್ಯಾಮಲಗನ್ನ ॥ ಪ್ರಾಶನ ॥ ॥ ೯ ॥

ಅಚ್ಯುತಾನಂತ, ಗೋವಿಂದನಿಗೆ । ಸಚ್ಚಿದಾನಂದ, ಮುಕುಂದನಿಗೆ ।
ಕಚ್ಛಪ, ವಾಮನ, ವಿಕ್ರಮ, ರಾಮಗನ್ನ ॥ ಪ್ರಾಶನ ॥ ॥ ೧೦ ॥

ಶ್ರೀಧರ, ಕೇಶವ, ವಿಶ್ವಂಭರ । ಮಾಧವ ನೃಸಿಂಹ, ಪೀತಾಂಬರ ।
ಯಾದವ ಸುಂದರ ದಾಮೋದರನಿಗನ್ನ ॥ ಪ್ರಾಶನ ॥ ॥ ೧೧ ॥

[ಹೆಣ್ಣು ಮಗುವಿಗೆ]

ದಾಟಿ:–ಸಖಿ ಆನಂದತನಯುನ ಘನಸುಚರಿತವು ಲಲಿತಸುಚರಿತವು ಲಲಿತ— ಎಂಬಂತೆ

ಅನ್ನ ಪ್ರಾಶನವನು ಶುಭವಿಶೇಷ
ದಿನ ನಡೆಸಿದರು. ಸು–ದಿನ ನಡೆಸಿದರು ॥

ಗುರುಗಣೇಶರ ಪೂಜಿಸುತಾದಿ ।
ಪಯಣಕೆ ಮುದದಿ, ಸು–ಪಯಣಕೆ ಮುದದಿ ॥

ನಾಂದಿ, ಪುಣ್ಯಾಹಗಳ ಘೋಷ–
ದಿಂದ ನಡೆಸಿ ಹೊರದೆಸೆಗೆ । ಘೋಷ । ದಿಂದ ನಡೆಸಿ ಹೊರದೆಸೆಗೆ ॥

ಪಂಚಕುಜದ–ಗೊಂಚಲುಗಳ
ಮಿಂಚುವ ಮಂಟಪದೆಡೆಗೆ–ಒಳ್ಳೆ–ಮಿಂಚುವ ಮಂಟಪದೆಡೆಗೆ ॥

ಶಂಖನಿನದ–ಮುಖ್ಯ ವಾದ್ಯ
ಧಿಂಕಾರದಿಂದಲ್ಲಿ ಬಂದು–ವಾದ್ಯ–ಧಿಂಕಾರದಿಂದಲ್ಲಿ ಬಂದು ॥

ಮಿತ್ರನಡಿಯ ಪ್ರಾರ್ಥಿಸುತ ಸಾ–
ವಿತ್ರೀ ತುಲಸಿಯರ ನಮಿಸಿ–ಸಾ–ವಿತ್ರೀ ತುಲಸಿಯರ ನಮಿಸಿ ॥

ಬಾಳೆಹಣ್ಣು-ಬೆಲ್ಲಜೇನು
ಶಾಲ್ಯನ್ನ ದಧ್ಯಾಜ್ಯದೊಡನೆ-ಜೇನು-ಶಾಲ್ಯನ್ನ ದಧ್ಯಾಜ್ಯದೊಡನೆ
ಮುಗುಳು ನಗೆಯು-ಮೊಗದ ಸಿರಿಯು
ಮಗಳನು ತೊಡೆಯಲಿರಿಸುತ-ಕನ್ನ-ಮಗಳನು ತೊಡೆಯಲಿರಿಸು
ಅನ್ನ ಕೊಡುವ-ಅನ್ನದೇವ!
ಅನ್ನವೆನಗೆ ಕೊಡು ಪೂರ್ಣ-ದೇವ!-ಅನ್ನವೆನಗೆ ಕೊಡು ಪೂರ್ಣ
ಸರುವ ದಣಿವು-ನೀಗಿ ಸುಖವು
ಆರೋಗ್ಯವಾಯುಷ್ಯವಹವು-ನಿತ್ಯ-ವಾರೋಗ್ಯ ವಾಯುಷ್ಯವಹವು

ಚೌಲದ ಹಾಡು

ಚೌಲವ ಮಾಡಿದನು-ಸುತಗೆ ಪಿತ
ಚೌಲವ ಮಾಡಿದನು ॥

ನೀಲ ಘನ ಶ್ಯಾಮಲ ರಾಮನಿಗೆ
ಚೌಲವ ಮಾಡಿದನು ॥

ಗುರುಗಣಪತಿಗಳ ಚರಣವ ಪೂಜಿಸಿ,
ವಿರಚಿಸಿ ನಾಂದಿ ಪುಣ್ಯಾಹಗಳ ॥

ಭಾವ ಶುದ್ಧಿಯಲಿ ಭಗವತಿ ಲಕ್ಷ್ಮೀ
ದೇವಿಯ ವಿನಯದಿ ಭಾವಿಸುತೆ ॥

ಪಾಲಿಸಲಿ! ನಿರ್ಜರಾಳಿ ನಿನ್ನ ತೊಡ-
ರಿಲ್ಲದೆ ಶತಸಮ ಬಾಳ್ವಂತೆ ॥

ಬುದ್ಧಿಯು, ಕಾಂತಿಯು। ಋದ್ಧಿ, ಸ್ಮರಣೆಯು,
ವಿದ್ಯೆಯು ಸಂತತ ವರ್ಧಿಸಲು ॥

ಮಂಗಲ ಸೌಭಾಗ್ಯಂಗಳು ನಿತ್ಯವು
ಪೊಂಗಲೆನುತಲಭಿಮಂತ್ರಿಸುತೆ ॥

ನೀರಾಕ್ಷತಸುಮದೂರ್ವಾದಿಗಳನು
ಸೇರಿಸಿ, ಪ್ರೋಕ್ಷಿಸುತಲಿ ಶಿರದಿ ॥

ಪಂಚಮ ವರ್ಣದಿ ಪಂಚಗವ್ಯಗಳ
ಸಿಂಚಿಸಿ ಮಸ್ತಕದಲಿ ಪಿತನು ॥

ಓಷಧಿಗಳೆ! ಶಮಿಕುಶಗಳೆ! ಶಾಶ್ವತ
ಪೋಷಿಸಿ ಕೊಳಿರೀತನನೆಂದು ॥

ಪಾರ್ಶ್ವಾಗ್ರಪೃಷ್ಠಭಾಗಂಗಳೊಳಿಹ
ಕೇಶಂಗಳ ನೆರೆ ಕತ್ತರಿಸಿ, ॥

ತೀರಿಸಿ ವಪನದ ಕಾರ್ಯಗಳನು ಭ-
ದ್ರಾರತಿ ಬೆಳಗಿ ದಾಮೋದರಗೆ ॥

ಅರಸಿನೆಂಣೆ

॥ ಝುಂಪೆತಾಳ ॥ ಧಾಟಿ:-ಕಂಡು ಕಂಡು ನೀಯೆನ್ನ ಕೈಬಿಡುವರೇ ಕೃಷ್ಣ । ಎಂಬಂತೆ.

ಹರಿಣಾಕ್ಷಿಯರು ನೆರೆದು । ಹರುಷದಲಿ ಹಚ್ಚಿದರು
ಹರಿಗೆ ಅರಸಿನ ಚೂರ್ಣ । ಬೆರೆತೆಣ್ಣೆಯ ॥

ಮುಂದಾಗಲಿರುವ ವ್ರತ । ಬಂಧನಕೆ ಮೊದಲು ವಿಧಿ-
ಯಿಂದ ಮಂಗಲ ಸ್ನಾನ । ಮಾಡಲೆಂದು ॥ ೧ ॥

ಮಣಿಮಯದ ಮಣೆಗೆ ನೂ । ತನವಸನವನು ಹಾಸಿ
ಧ್ವನಿಯೆತ್ತಿ ಗೀತಶೋ । ಭನ ಪಾಡುತ ॥ ೨ ॥

ಚಂದದಲಿ ಹರಿಯ ಕರೆ । ತಂದು ಕುಳ್ಳಿರಿಸಿ ಮುದ-
ದಿಂದಲಕ್ಷತೆ ಹಾಕಿ । ದರು. ಸತಿಯರು ॥ ೩ ॥

ಪರಿಮಳಿಪ ಕತ್ತುರಿಯ । ನಿರಿಸಿದರು ನೊಸಲಿನೊಳು ।
ಕರದೊಳಿಟ್ಟರು. ದಿವ್ಯ । ತಾಂಬೂಲವ ॥ ೪ ॥

ರಾರಾಜಿಸುವ ರತುನ । ದಾರತಿಯ ಬೆಳಗಿದರು
ನೀರೇಜಮುಖ ರಾಜ । ಗೋಪಾಲಗೆ ॥ ೫ ॥

ಧಾಟಿ:—ಎಂದೋ ಎಂದೋ—ನಿನ್ನ ದರುಶನ ॥ ಎಂಬಂತೆ.

ಬಾರೆ ಬಾರೆ ನೀರೆ । ನೀರಜಲೋಚನೆ ಬಾರೆ ॥

ಮದವಾರಣೇಂದ್ರ ಗಮನೆ । ಮೃಗರಾಜ ಕಟಿವಿಧಾನೆ ।
ಮೃದುವಚನೆ! ಚೆಲುವ ಹೆಣ್ಣೆ । ತಡಮಾಡದಿಲ್ಲಿಗೊಡನೆ ॥

ಶುಭಸಮಯವೀಗ ಬಂತು । ಅರಸಿನದ ಚೂರ್ಣ ಬೆರೆತು ।
ಪರಿಮಳದ ತೈಲವನ್ನು । ತಲೆಗೆರೆವೆ ತಂಪಿಗಾನು ॥

ಭಂಗಾರದಾಭರಣವ । ಮೈತುಂಬ ಧರಿಸಿ ಮೆರೆವ ।
ಭೃಂಗಾಳಿಯಂತೆ ಪೊಳೆವ । ಕುಂತಳದ ಚೆಲುವೆಯುವ್ವ ॥

ಕಲ್ಯಾಣದಾದಿಯಲ್ಲಿ । ನಿನಗುಳ್ಳ ಕಾರ್ಯವಿಲ್ಲಿ ।
ಕ್ರಮದಿಂದ ನಡೆಯಲಿಹುದು । ದಾಮೋದರಂಗೆ ಮಣಿದು ॥

ಶೋಭಿಸುವ ಪೀಠದಲ್ಲಿ । ಓಲಗಿಸು ಚಂದದಲ್ಲಿ ।
ಆರತಿಯನಂಗನೆಯರು । ಬೆಳಗುವರು ಮಂಗಲೆಯರು ॥

ಉಪನಯನ

ಧಾಟಿ:—ಎಂತು ರಂಜಿಪರು ದಂಪತಿಗಳಿವರು—ಎಂಬಂತೆ ॥

ನಯನ ಮಾಡಿದನು—ತಂದೆಯು ತನಯಗುಪ-
ನಯನ ಮಾಡಿದನು ॥
ನಿಯಮಯುತ ಪ್ರಥಮಾಶ್ರಮಕೆ ದಾ
ರಿಯನೆ ದೋರುವ ದಿವ್ಯತೇಜದ ॥
ಇಷ್ಟವೆಲ್ಲವು ಸಿದ್ಧಿಸುವ ಜನು-
ಮಾಷ್ಟಮದ ವತ್ಸರದಿ ಬುಧಸಿತ-
ರಿಷ್ಟದಲಿ ಸೋಮಾರ್ಕಗುರುಗಳು
ಶ್ರೇಷ್ಠರೆನಿಸಿಹ ಶುಭ ಮುಹೂರ್ತದಿ ॥
ಮೂರು ಕೃಛ್ರವ ಮಾಡಿ ಪಿತನಧಿ-
ಕಾರ ಬರಲುಪನಯಕೆ ತನ್ನ ಕು-

ಮಾರನಿಗೆ ಹನ್ನೆರಡು ಸಾವಿರ
ಸಾರಿ ಗಾಯತ್ರಿಯನು ಜಪಿಸುತ ॥

ಸ್ವಸ್ತಿವಾಚನ, ಮಾತೃಕಾರ್ಚನೆ,
ಶಸ್ತವಾಗಿರುವಂಕುರಾರ್ಪಣ ।
ಮತ್ತೆ ನಾಂದೀಶ್ರಾದ್ಧಗೈದೊಂ-
ಬತ್ತು ಗ್ರಹರಿಗೆ ಶಾಂತಿಗೈದುಪ- ॥

ಪೂಗಗ, ನಾರೀಕೇಳ, ತಂಡುಲ,
ನಾಗವಲ್ಲೀದಳಗಳಿಂದಲೆ ।
ಸಾಗಿರುವ ಮಂಟಪ ಪ್ರತಿಷ್ಠೆಯ-
ದಾಗಿ, ಕುಲದೇವತೆಯ ಸ್ಥಾಪಿಸಿ ॥

ಸಿದ್ಧಿಸಲು ಶುದ್ಧ ದ್ವಿಜತ್ವವು
ಶ್ರದ್ಧೆಯಿಂದಲೆ ಸಾಂಗವೇದಗ-
ಳಧ್ಯಯನದಧಿಕಾರ ಬರೆ ಪರಿ-
ಶುದ್ಧ ಮಂಗಲಸ್ನಾನಗೈಯುತ ॥

ಸಿಂಗರಿಸಿ ವಟುವನ್ನು ಪುಣ್ಯಾ
ಹಂಗಳನು ವಾಚಿಸಿ ಜನನಿಯು-
ತ್ಸಂಗಭೋಜನವಾಗಿ ಕ್ಷೌರ ಕ-
ರ್ಮಾಂಗವನು ಕ್ರಮದಿಂದ ತೀರಿಸಿ ॥

ಪುತ್ರನಾಸ್ಯವ ನೋಡಿಕೊಂಡು ಪ-
ವಿತ್ರ ಭದ್ರಾಷ್ಟಕವ ತಾ ಪಠಿ-
ಸುತ್ತಖಿಳ ವಿಪ್ರೋತ್ತಮರು ಪೇ-
ಳ್ವ ತ್ರಯೀ ಘೋಷಗಳ ಕೇಳುತ ॥

ಸೂತ್ರ ಕೌಪೀನಾಂಬರಾಜಿನ
ವಸ್ತುಗಳ ಧರಿಸುತ್ತ ಪೂರ್ವಮು-
ಖಿಸ್ಥನಾದ ಕುಮಾರನಿಗೆ ವರ-
ವಸ್ತ್ರದಿಂದಲೆ ಮುಸುಕಿ ಮೋದದಿ ॥

ರುದ್ರವಿಧಿವಿಷ್ಣುಗಳು ಮಾಡಿದ
ಶುದ್ಧ ಸೂತ್ರಕೆ ಪ್ರಣವ ಶಿಖಿ ಮೊದ-
ಲಾದ ದೇವತೆಗಳನು ಮಂತ್ರಿಸಿ,
ವಾದ್ಯ ಶಂಖನಿನಾದ ಮೊಳಗಲು ॥

ಹುತವಹನ ಮುಖದಿ ಪ್ರಧಾನಾ-
ಹುತಿಯು ಪವಮಾನಂಗೆ ಚಂಡ-
ದ್ಯುತಿಗೆ ತ್ರಿತಯಾರ್ಘ್ಯಾಂಜಲಿಯು ಕೊಡಿ-
ಸುತ, ಪುರೋಹಿತ ವಟುವಿನಿಂದುಪ ॥

ಮಿತ್ರ ಮಾರ್ತಾಂಡಾರ್ಯಮಾರ್ಕಾ-
ದಿತ್ಯ ಬ್ರಹ್ಮರಿಗಿತ್ತೆ. ವಟುವನು ।
ನಿತ್ಯ ಸಲಹಲ್ಕೆನುತ – ಭಾವಿಸಿ,
ಚಿತ್ರಭಾನುಗಳನ್ನು ನೋಡಿಸಿ ॥

ಮಾಡಿಸುತ ತಾನಗ್ನಿಕಾರ್ಯವ
ಪಾಡುತಿರುವವರೆಡೆಬಿಡದೆ ಕಾ-
ಪಾಡುವಧಿದೇವತೆಯು ಭಾವಿಸಿ,
ಮಾಡಿ ಗಾಯತ್ರಿಯುಪದೇಶವ ॥

ಸುತ್ತಿಕೊಂಡಾ ಮೇಖಲೆಯು ಮೂ-
ಸುತ್ತು ಬಂಧಿಸಿ, ಬಟುವು ತಾ ವೇ-
ದತ್ರಯಾವೃತನಾದೆನೆನುತಲಿ,
ಚಿತ್ತದಲಿ ಭಾವಿಸಿ ವಿನೋದದಿ ॥

ಬ್ರಹ್ಮಚಾರಿಯು ನೀನು! ನಿನಗಿದು
ಧರ್ಮರಕ್ಷೆಗಧರ್ಮ ಶಿಕ್ಷೆಗೆ!
ಕರ್ಮಸಾಧನೆಗಿರುವ ದಂಡವಿ-
ದೊಮ್ಮನದಿ ಸ್ವೀಕರಿಸೆನುತಲುಪ-

ಮೂತ್ರ, ಮಲ, ಮೊದಲಾದ ಶುದ್ಧಿಗೆ
ಶಾಸ್ತ್ರರೀತಿಯೊಳಾಚಮನೆ ಮಾ-

ಡುತ್ತ ಸಂಧ್ಯೋಪಾಸನೆಗಳನು
ಹೊತ್ತು ಹೊತ್ತಾಚರಿಸೆನುತಲುಪ-

ಹಗಲು ನಿದ್ರೆಯ ಬಿಡು! ಸಮಿಧೆಯನು
ಯುಗಲ ಸಂಧ್ಯೆಯೊಳಾಹುತಿಯ ಕೊಡು!
ಅಗಲದಾಗಮವೆಲ್ಲ ಕಲಿಯುತ,
ಯುಗಸಮಯ ಭಿಕ್ಷೆಯನು ಯಾಚಿಸು ॥

ದೂರಬಿಡು ದ್ಯೂತಾನೃತಂಗಳ!
ದೂರಬಿಡು ಹಾಡಾಟಹಟಗಳ!
ದೂರಬಿಡು ಕಾಮಾದಿರಿಪುಗಳ!
ಧಾರುಣೀತಲ್ಪದೊಳೊರಗೆನುತ ॥

ತ್ಯಜಿಸು ಮಧು ಮದ್ಯರಸ ಗುಡಗಳ
ತ್ಯಜಿಸು ಮಾಂಸ, ಸುಗಂಧವಸ್ತುವ ।
ತ್ಯಜಿಸು ಮಾಲ್ಯಾಂಜನ ಕಲಹಗಳ
ತ್ಯಜಿಸು ಛತ್ರಾಭ್ಯಂಗಗಳೆನುತ ॥

ಪ್ರಾಣಿ ದಯೆಯಿಡು ಬ್ರಹ್ಮಚರ್ಯವ
ಪೂರ್ಣ ಹನ್ನೆರಡಬ್ದ ನಡೆಸು ವಿ
ಧಾನದಲಿ ದಾಮೋದರನ ಸು-
ಧ್ಯಾನ ಕಥನವ ಕೇಳುತಿರೆನುತ ॥

ಭಿಕ್ಷಾಯಾಚನೆ

॥ ಆದಿತಾಳ ॥ ಧಾಟಿ.— ಸಹಜನೆ ಕೇಳಿದು — ಎಂಬಂತೆ.

ಭಿಕ್ಷೆಯು ಕೊಡಿ ತಾಯೆ! ದಕ್ಷಿಣಾಮೂರ್ತಿಯೆ ।
ದೀಕ್ಷೆಯು ತಾಳಿಹೆ ರಕ್ಷಿಪುದೆನುವೆ ॥

ವೇದನೆಗಳ ಪೊತ್ತು । ಆದಿ ಜನ್ಮವನಿತ್ತು
ಕಾಯ್ದ ಪ್ರಥಮಶ್ರುತಿಯಾದ ಸಾವಿತ್ರಿ ॥ ೧ ॥

ಬಾಲನಾಗಿರೆ ನೀನೆ ಹಾಲು ಬೆಣ್ಣೆಗಳನ್ನೆ
ಶೀಲಿಸಿ ಲಾಲನೆ ಪಾಲನೆ ಗೈದೆ ನೀ ॥ ೨ ॥

ಜಾತಕರ್ಮಾದಿ ನಾ । ನಾತರ ಕರ್ಮವ
ರೀತಿಯೊಳ್ನಡೆಸಿದೆ ತಾತ! ಭವಾನ್ ಪಿತ ॥ ೩ ॥

ಮಧ್ಯಮಾಗ್ನಿಯು ನೀನೆ! ಮಧ್ಯಮಾಗಮು ನೀನೆ!
ಮಧ್ಯಭುವನ ನಿತ್ಯಾ — ರಾಧ್ಯನು ನೀನೇ ॥ ೪ ॥

ಗುರುವರಿಯುನಿಗೆನ । ಗಿರ್ವಾವ ಭೋಜನದ
ವರಸಾಧನವನು ಕಿರಿಯ ಜನನಿ ಕೊಡು ॥ ೫ ॥

ಚಿಕ್ಕವನಾಗಿರೆ । ಅಕ್ಕರದಿಂದಲೆ ।
ತಕ್ಕುದ ನೀಡಿದ ಅಕ್ಕ ತಂಗಿಯರಿ ॥ ೬ ॥

ಬಂಧು ಜನರೆ! ನಿಮ್ಮ ಮಂದಿರಕಿಂದು ನಾ
ಬಂದು ಬೇಡುವೆ ಪ್ರತಿ–ಬಂಧಕವಿಲ್ಲದೆ ॥ ೭ ॥

ಮೂರು ವೇದಗಳೋದು! ಆರು ಶಾಸ್ತ್ರಗಳೋದು
ಮೂರಾರು ಪುರಾಣವ ಪೂರದೀ ಪಠಿಸು ॥ ೮ ॥

ಸಮಾವರ್ತನೆ

। ಆದಿತಾಳ ॥ ಧಾಟಿ:— ಕ್ಷೀರಶರಧಿ ಶಯ — ಎಂಬಂತೆ

ಗುರು ಚರಣವ ಪಿಡಿದು,
—ಒಲಿದು, ಅನುಜ್ಞೆವಡೆದು ।
ಹೊರಟನು ಮಣಿದು,
ಗುರುಚರಣವ ಪಿಡಿದು ॥

(ಶಿಷ್ಯ) ಏನನಿಚ್ಛಿಸುವೆ? ಮಾನ್ಯ ಶ್ರೀ ಗುರುವೆ!
ನ್ಯೂನವಿಲ್ಲದೆಲ್ಲವನೊದಗಿಸುವೆ ।
ಮಾನಸದೊಳಗನುಮಾನವನಿಡದೆ
ನೀನರುಹೆನ್ನೊಳು ಕರಗಳ ಮುಗಿವೆ ॥ ೧ ॥

(ಗುರು) ಲೇಸನುಡಿದೆ ನೀನಾಶೆಗಳೇನಿದೆ?
ಕ್ಲೇಶವಿಡದೆ ಸೇವೆಯನೀವರಿಗೆ ।
ದೋಷವಿಲ್ಲದಾಚರಿಸಿದ ಬಗೆಗೆ
ತೋಷಗೊಂಡೆ ನಿನ್ನತಿಶಯ ಗುಣಕೆ ॥ ೨ ॥

ವೇದ ತದಂಗಗಳಾದಿಯಿಂದೆಲ್ಲ
ಓದಿಸಿದಾ ಗುರು ಪೇಳ್ದುದನಖಿಳ
ಸಾಧಿಸಿ ದಕ್ಷಿಣೆಯರ್ಪಿಸಿ ಬಹಳ
ಮೋದಗೊಳಿಸಿದನು ಶಿಷ್ಯನು ಗುರುವ ॥ ೩ ॥

ಕೇಶನಖಾದಿಕ್ಷೌರವ ನಡೆಸಿ,
ಶೇಷಾಷ್ಟಘಟಸ್ನಾನವ ಮುಗಿಸಿ,
ವಾಸವ ಮಂತ್ರೋಚ್ಚಾರದಿ ಧರಿಸಿ,
ತೋಷದೊಳೆಲ್ಲಾಭರಣವನಿರಿಸಿ ॥ ೪ ॥

ಏರೆನು ನಾ ಮರವನ್ನು, ಬಾವಿಗೆ
ಹಾರೆನು, ನದಿಯನ್ನೀಜಾಡೆನು ನಾ,
ನಾರಿಯರನು ಬತ್ತಲೆ ನೋಡೆನೆನುತ-
ಸಾರಿ ಪ್ರತಿಜ್ಞೆಯ ಗುರುವಿನ ಮುಂದೆ ॥ ೫ ॥

ಛತ್ರ ಹೇಮ ಮಣಿಕುಂಡಲಗಳನು,
ಕ್ಷೇತ್ರಧಾನ್ಯಧೇನ್ವಶ್ವಗಳನ್ನು ।
ವಸ್ತ್ರಯುಗಳ ದಿವ್ಯಪಾದುಕೆಗಳನು-
ಯಿತ್ತಾಚಾರ್ಯನ ಹರುಷಿಸಿ ತಾನು ॥ ೬ ॥

ಜನನಿ-ಕಣ್ಣಿಗಂಜನ, ಕಂಠದೊಳು
ಕನಕಮಾಲೆ ಮಣಿಗಳ, ತಂದಿಡಲು
ಜನಕನು-ದಂಡೋಷ್ಣೀಷಾದಿಗಳನು,
ಅನುಲೇಪನ, ಹಾವಿಗೆ, ಕೊಡೆ, ಕೊಡಲು ॥ ೭ ॥

ವ್ರತಲೋಪ ಪ್ರಾಯಶ್ಚಿತ್ತವನು
ಪ್ರಥಮಗೈದು ನಾಂದೀ ಶ್ರಾದ್ಧವನೂ,
ಜೊತೆಯಲಿ ಪುಣ್ಯಾಹವ ನಡೆಸುತಲಾ-
ಹುತವಹಗಿತ್ತಾಜ್ಯಾಹುತಿಗಳನು ॥ ೮ ॥

ಭೂವಿಬುಧರಿಗೊಂದಿಸಿ, ಪ್ರಾಮುಖ್ಯ
ದೇವತೆಗಳನರ್ಚಿಸಿ ವಹ್ನಿಯೊಳು ।
ಭಾವದೃಢದಿ ದೀರ್ಘಾಯುಷ್ಯ ಮೊದಲಾ-
ದಾವಾಂಛಿತಗಳ ಬೇಡಿದನೆಲ್ಲ ॥ ೯ ॥

ಸಮಾವರ್ತನೆಯ ಕ್ರಮದಲಿ ಗೈದು
ಶಮಾದಿಗಳನನುಸರಿಸುತೆ ಬಂಧು ।
ಸಮೂಹದೊಳಗಾನಂದದೊಳಿರಲು
ಸುಮಂಗಲೆಯರಾರತಿ ಬೆಳಗಿದರು ॥ ೧೦ ॥

ಎರಡನೆಯ ಭಾಗ

ಬಾಸಿಂಗ ಕಟ್ಟುವುದು

ಧಾಟಿ: — ಕಲಿಯುಗದಲಿ ಹರಿನಾಮವ ನೆನೆದರೆ — ಎಂಬಂತೆ.

ಪರಿಣಯಬಾಂದಿಗೆ ಪರಿಮಳಿಸುವ ಸುಮ
ಸರವ ಮುಂದಲೆಯೊಳಿರಿಸಿದ ಪಿತನು ॥
ಪೊಸತಹ ಪೂಗದ ಕುಸುಮದೊಡನೆ ಶೋ-
ಭಿಸುವ ಸುಮನಸ ಮಾಲಿಕೆಯನ್ನು ॥ ೧ ॥

ಕಣ್ಣಿನೇಟು ಮೊದಲಾದ ಪೀಡೆ, ತನು-
ವನ್ನು ಬಾಧಿಸಲು ಬಿಡದಂತಿರುವ ॥
ಎಲೇಕಾಡಿಗೆ! ಕಂಗಳ ಕಾಪಾಡೆನು-
ತಲೆ ತಾಯಿಯು ಕಜ್ಜಲವ ಹಾಕಿದಳು ॥ ೨ ॥

ಮುಕ್ತಾವಳಿಮಣಿಚಿತ್ರಿತಹಾರವ
ಕುತ್ತಿಗೆಯೊಳು ಸಾವಿತ್ರಿ ತೊಡಿಸಿದಳು ॥
ದಿನಕರನಂತಿಹ ಮಣಿಗಳು ಮಿನುಗುವ
ಕನಕ ಕುಂಡಲಗಳನು ಕಿವಿಗಿಟ್ಟು ॥ ೩ ॥

ದೀರ್ಘಾಯುಃಷವಾರೋಗ್ಯ ಸೌಖ್ಯಸೌ-
ಭಾಗ್ಯಮಂಗಳಗಳಾಗಲಿ! ಎನುತ ।
ಭೋಗವೈಭವಗಳಾಗಿ ನಿರತ ಲೇ-
ಸಾಗಿ ಲೇಸು ಸಾಗಲಿ ಎಂದೆನುತ ॥ ೪ ॥

ವನಕಧಿಪತಿ ನೀನೆನಿಸಿಹೆ ಬಿದಿರೆ!
ಅನುದಿನವೆನ್ನನು ಸಲೆ ಸಲಹೆನುತ ॥
ಕರದಲಿ ದಂಡವ ಧರಿಸಿಹ ಸದ್ಗುಣ
ಶರಣನ, ದಾಮೋದರ! ಪೊರೆಯೆನುತ ॥ ೫ ॥

ಸ್ವಾಗತೋಪಚಾರ

॥ ಆದಿತಾಳ ॥

ಬಂದಿಹರೇ ದಿಬ್ಬಣಿಗರು । ಬಂಧುಜನಗಳೆಲ್ಲರು ॥
ಬಿಸಿಲಿಂದ ಬಲುಬಳಲುತಲೆ । ತೃಷೆಯಿಂದ ಬಾಯಾರುತಲೆ
ಹಸುವೇರಿ ಬಸಿರಾರಿ । ದಾರಿಯೊಳ್ ದಣಿದಿರಿ ॥ ೧ ॥
ಮೃದುರತ್ನ ಕಂಬಳವಿಲ್ಲಿ । ಹೊಸತಾದ ಹಸೆಮಣೆಯಲ್ಲಿ
ವರವಿಷ್ಟರಗಳಲ್ಲಿ । ಕುಳ್ಳಿರಿ ಸುಖದಲಿ ॥ ೨ ॥
ಇಗೊಳಿಲ್ಲಿ ಪರಿಮಳ ಜಲವು । ಮಗುಳಲ್ಲಿ ಶುದ್ಧೋದಕವು
ತೊಳಕೊಳ್ಳಿರೆಲ್ಲರೀಗ । ಕೈಕಾಲು ಮೊಗಗಳ ॥ ೩ ॥
ಸವಿಗೊಳ್ಳಿರೀ ತನಿವಾಲ । ಕೈಗೊಳ್ಳಿರೀ ಸೀಯಾಳ!
ರಸದಾಳಿ ಕಬ್ಬುಕೋಲ । ರಸಪಾನೀಯಂಗಳ ॥ ೪ ॥
ಶ್ರೀಗಂಧ ಕುಂಕುಮಸಾರ । ವೈಗಿಂದು ಪೂಸಿರಿ ಪೂರ ।
ಸೌಗಂಧಿ ಪನ್ನೀರ! ಸ್ವೀಕಾರ ಸುಖಕರ ॥ ೫ ॥
ಮಂದಾರ ಮಲ್ಲಿಗೆ ಬಕುಳ । ಕುಂದಾರವಿಂದದ ಮುಕುಲ ।
ತಂದಿಹದೆ ಕೊಳ್ಳಿರೆಲ್ಲ । ತಾಂಬೂಲಾದಿಗಳ ॥ ೬ ॥
ತಂಗಾಳಿ ಬೀಸುವ ವ್ಯಜನ । ಶೃಂಗಾರವಾಗಿಹ ಭವನ ।
ಮಂಗಲೋತ್ಸವಕಿಂದು । ಸಂಗಾತಿರೆಲ್ಲರು ॥ ೭ ॥

ಕುಶಲ ವಿಚಾರ

। ಆದಿತಾಳ ॥

ನೋಡಿ ಬನ್ನಿರಮ್ಮ। ದಿಬ್ಬಣ । ಕೂಡಿಬಂದೆವಮ್ಮ!
ನಾಡಿನವರನಿರಿಸಿ । ನಮ್ಮೊಳ । ಗಾಡಿದುದನುಸರಿಸಿ,
ವರನೊಡ— ನಾಡಿಗಳನುಮೆರಸಿ । ಕರಿರಥ-
ವಾಡವವನುಗೊಳಿಸಿ— ನಿದಾನಿಸಿ ॥ ೧ ॥

ದೂರದೇಶದಿಂದ। ಹೊರಟು ಬಂದ। ದಣುವಿನಿಂದ।
ಬಲುಶ್ರಮ-ವೇರಿ ಭಾರಿ ಬಾಯಾರಿ ಬಸವಳಿದ
ಭೂರಿಜನಕೆ ಬೀಡಾರವ ಕೊಡಿಸಿರಿ ॥ ೨ ॥

ಸಾಂಗವೇದವಿದರ। ಸಕಲಬುಧರ। ಸಖಸುಜನರ
ಚತುರ್ವಿಧ-ಸಂಗೀತದವರ ಸಂಗಾತರ ಸಹ,
ಸಂಗಡಿಸುತ ಘೋ। ಷಂಗಳೊಳ್ಳಿಗೆ ॥ ೩ ॥

ಕರಚರಣಾನನವ। ತೊಳೆದುಕೊಳುವ। ವಿಮಲಜಲವ
ಸುಪೀತವ-ತರಿಸಿ ತರುಣರಿಗೆ, ತರುಣಿಯರಿಗೆ ಮು-
ತ್ತಿರುವವರಿಗೆ ಕೊಡಿ। ಸಿರಿ ತೃಷೆ ತಣುಪಿಗೆ ॥ ೪ ॥

ಹಾಲಮೃತೋದಕವ। ಮಧುರಮೃದುವಾ। ದಮಾಳಫಲವ
ಖರ್ಜೂರ, ರ-ಸಾಲ, ಜಂಬುಫಲ। ನಾಳಿಕೇರ, ತಾಂ-
ಬೂಲ, ಮಾವು ಮೊದ। ಲುಳ್ಳವುಗಳ ಕೊಡಿ ॥ ೫ ॥

ಆಹ್ವಾನ

(ಮದುವಣಿಗನನ್ನು, ಮದುವೆ ಮಂಟಪಕೆ ಕರೆಯುವ ಹಾಡು)

ದಾಟಿ:— ಲೋಕಮೋಹಕಂ ಶ್ರೀಕರ ಮೆನೆಮುದಮಂ-ಎಂಬಂತೆ,

ಬಾರೊ ಸುಂದರ! ಶ್ರೀರಮಣನೆ ಮುದದಿಂ।
ಕ್ಷೀರಾಂಬು ನಿಧಿಯೊಳು ಮೆರೆಯುವ। ಸುಮಣಿ ಮಂಟಪಕೆ ॥ ಪ. ॥
ಸಾಧುಗಳು ಮನದಿ। ನೆನೆವ ವಿಧದಿ
ಬಲುಕರುಣದಿ। ಕೊಡೆಭರದಿ ॥ ಅ.ಪ. ॥

ನಂದನ ಕಂದ ಮು। ಕುಂದ ಪುರಂದರ। ವಂದ್ಯಾನಂದ ॥
ಹೊಂದುತೆ ಪರಮಾನಂದವ ಮನದಿ
ಸಿಂಧುಮಂದಿರನೆ! ಮಂದರಧರಹರಿ ॥ ೧ ॥

ಮುನಿಜಾಲಾವನ ಶೀಲಾ। ವನಮಾಲಾ ಮನಸಿಜಪಿತ।
ವಾರಣವರವರದಾಂಬುರುಹಗದಾ-
ದರಾರ್ತಿಕರಾರಿಪಿದಾರ ಮುರಹರಿ ॥ ೨ ॥

ವಾಮನ! ಮಾಮಾನವೋಹನ! ಚಿದ್ಘನ! ಕೂರ್ಮಾಕಾರ।
  ರಾಮರುಚಿರ ದಾಮೋದರ ಮಥುರಾ
   ಧಾಮ ಧರ್ಮಪರಿಪಾಲನೆ! ಸುಗುಣನೆ ॥ ೩ ॥
ವಸುದೇವಸುತದೇವಾ। ಚಿಗತದೇವಾನತವಿಧಿಭವ।
  ಮಾಧವ ಮಧುಮಥನ। ಶುಭಕಥನ
   ಸುಪರ್ಣಸುಯಾನ ಪುರಾಣಪುರುಷನೆ! ॥ ೪ ॥

ವರಣಮಾಲಿಕೆ

(ವಧೂವರರು ಮಾಲೆ ಹಾಕಿಕೊಳ್ಳುವ ಹಾಡು.)

ಡಾಟಿ: — ಬಾರೆ ಸುಂದರಿನಾರಿ— ಎಂಬಂತೆ ॥

ಪಾಲಿಸೈವನಮಾಲಿ। ಶ್ರೀಕರು।
ಣಾಳು ನಿನ್ನಯ ಕೊರಳೊಳು
  ಮಾಲತೀಸುಮ ಮಾಲೆಯಿಡುವೆ ತ।
  ಮಾಲನೀಲನೆ! ಮುದದೊಳು ॥
   ಸುಂದರಾಂಗ ಮುಕುಂದ! ನಿನ್ನನು
   ಹೊಂದಿಸಾ ಸುಖ ಹೊಂದುವೆ
    ಸಂಧಿಸಿದ ಸಂಬಂಧವಿದೊಮ್ಮೆ-
    ದೆಂದಿಗೂ ಸ್ಥಿರವಾಗಲಿ!
   ಅರ್ಥಿಸುವೆ ನಾನೆನ್ನ ನೀ ದಾಂ-
   ಪತ್ಯಧರ್ಮದಿ ರಕ್ಷಿಸೈ।
  ಪ್ರಾಪ್ತಿಸಿದೆ ಸಂಪತ್ತನೆಲ್ಲವ
  ಸಾರ್ಥವಾಯಿತು ಜನ್ಮವು।
ಬ್ರಹ್ಮಚರಿಯವ ಕಳೆದೆರಡನೆಯ
ನಿರ್ಮಲಾಶ್ರಮದಿಂದಲಿ।
  ಧರ್ಮಕಾಮಾರ್ಥಗಳ ಪಡೆಯಲು
  ಧರ್ಮಪತ್ನಿಯ ಮಾಡಿದೈ ॥

ಸಾಧಿಸುತ ಗಾರ್ಹಸ್ಥ್ಯಮಾರ್ಗವ
ನಾದಿತೇಯರನರ್ಚಿಸಿ ।
ಮೋದದಿಂದಲಿ ತರ್ಪಿಸುವ! ದಾ-
ಮೋದರನ! ನಾವನುದಿನ ॥

ಕನ್ಯಾದಾನ

(ಅಷ್ಟತಾಳ)

ದಾನಮಾಡಿದನು । ಜನಕನು ಕನ್ಯಾ । ದಾನ ಮಾಡಿದನು !
ಧಾನ್ಯಧನಕನಕಾದಿ ನಾನಾ । ದಾನಗಳಲಿ ಪ್ರಧಾನವೆನಿಸಿಹ ॥ ಅ.ಪ. ॥

ಕಾಂಚನಾಂಬರವು । ತಿಲಕವು ದಿವ್ಯ । ಕಂಚುಕಾಂಗದವು ।
ಕಾಂಚಿಕಿಂಕಿಣಿ ಕಡಗಕಂಕಣ
ಮಿಂಚುವೇಕಾವಳಿ ಶಿರೋಮಣಿ
ಚಂಚಲಿತತಾಟಂಕಮಣಿ ಕನ।
ಕಾಂಚಿತಾಲಂಕೃತೆಯ ವರನಿಗೆ ॥ ೧ ॥

ನಾರಕಂಗಳಲಿ । ನರಳುವ ಪಿತೃ । ವಾರ ಮೋದದಲಿ ।
ನೀರ ಜೋದ್ಭವನೂರ ಪಡೆಯಲು
ನೂರುಹಯಮೇಧಕೃತ ಫಲಕ್ಕೆ
ಸೇರಲಗ್ನಿಷ್ಟೋಮ ಪುಣ್ಯವು
ಸೇರಿಬರೆ ದಶದೋಷರಹಿತಗೆ ॥ ೨ ॥

ವಾರಿವಾತಾನಲ । ವ್ಯೋಮಾಚಲ । ಭೂರಿಭೂತಗಳ ।
ಮಾರಮಣ ಮೊದಲಾಗಿರುವ ಸುರ-
ವಾರಮುಖ್ಯರ ಸಾಕ್ಷಿಯಲಿ ಸುಶ
ರೀರ ಸುಕುಮಾರಗೆ ಧನಂಜಯ
ಧಾರುಣೀದೇವತೆಗಳಿದಿರಲಿ ॥ ೩ ॥

ಪುತ್ರಪೌತ್ರರನು । ಬೆಳೆಸುವ ತನ್ನ । ಗೋತ್ರ ಜಾತೆಯನು ।
ಪುತ್ರನಂದದಿ ಸಲಹುತೀ ದಿನ
ಶಾಸ್ತ್ರಮಂತ್ರ ವಿಧಾನಪೂರ್ವಕ
ದತ್ತಮಾಡಿದೆ ನಿನಗೆ ನಾ ಧ-
ರ್ಮಾರ್ಥಕಾಮಗಳನುಸರಿಸೆನುತ ॥ ೪ ॥

ವೇದಮಂತ್ರಗಳು । ಮಂಗಳತೂರ್ಯ । ವಾದ್ಯಘೋಷಗಳು ।
ಮೋದದಿಂಗೆ ಮೊಳಗುತಿರಲಾಬ್ರ
ಹ್ಮಾದಿಲೋಕವ ಪಡೆಯೆ ದೈವ-
ಜ್ಞೋದಿತಮುಹೂರ್ತದಲಿ ಮೂಜಗ-
ದಾದಿ ದಾಮೋದರಗೆ ಮಗಳನು ॥ ೫ ॥

ದಿಬ್ಬಣಿಗರ ಹಾಡುಗಳು

೧

ಆದಿತಾಳ

ಧನ್ಯಳಾದಳಮ್ಮ ನಿಮ್ಮ । ಕನ್ಯೆ ಪಾರ್ವತಿ ।
ಜನ್ಮಸಹಸ್ರಸಂಚಿತದ । ಪುಣ್ಯಫಲದಿ ॥

ಹೊಟ್ಟೆಗನ್ನ ಬಿಟ್ಟು ನಿದ್ರೆ । ಗೆಟ್ಟು ಬೆಟ್ಟದಿ
ನೆಟ್ಟವಾತವೃಷ್ಟಿಗೆ ಬೆಂ । ಗೊಟ್ಟು ಬಳಲಿ
ನಿಷ್ಠೆಯಿಂದಲಷ್ಟಮೂರ್ತಿ । ಯಿಷ್ಟನಾಗಲೆಂದು ಮತಿ
ಗೆಟ್ಟು ತಪಗೈದು ಕಷ್ಟ । ಪಟ್ಟ ಬಗೆಗೆ ॥ ೧ ॥

ಪುತ್ರಿಗತ್ಯಧಿಕ ಪ್ರಾಯ । ವ್ಯಾತೆನುತಲಿ
ರಾತ್ರಿಕರಾದಿತ್ಯ ಛಾಯಾ । ಪುತ್ರವಾರದಿ
ನಿತ್ಯತಾನೊಪ್ಪತ್ತಿನಲ್ಲಿ । ವಿತ್ತವಂತನುತ್ತಮನ
ಹಸ್ತಪಿಡಿವಂತೆ ಮಾಡೆ । ಯತ್ನಿಸಿದಕೆ ॥ ೨ ॥

ಧೇನು, ಧನ, ಕ್ಷೋಣಿ, ಸ್ವರ್ಣ । ವಸ್ತ್ರ, ವಿಪ್ರರ್ಗೆ
ನಾನಾದಾನಗೈವೆ. ನಿತ್ಯ । ವೆನ್ನ ಪುತ್ರಿಗೆ ।
ಜಾಣ, ಸುಪ್ರವೀಣ, ಸರ್ವ । ತ್ರಾಣ ರಮಣನಾದಡೆಂದು
ಧ್ಯಾನಿಸಿಕೊಂಡಿರ್ದಫಲ । ಪೂರ್ಣವಾಯಿತು ॥ ೩ ॥

೨

ಆದಿತಾಳ

ಜರೆಮರಣವ ಪರಿಹರಿಸಲೆನುತಲಿ
ನೆರೆದು ಸುರರು ದನುಜರು ಜಲಧಿಯಲಿ
ಗಿರಿಮಂಥ ಭುಜಗವರ ದಾಮಗಳಲಿ
ಭರದಿ ಮಥಿಸೆ ದೊರೆತಿರುವ ಶಶಾಂಕನ
ಧರಿಸಿಹನ ನೋಡು ಜಾಮಾತನ ॥ ೧ ॥

ಕುಟಿಲತನದಿ ಕೊಲೆ ಘಟಿಸಲು ಬಗೆದ
ಭಟರ ಜಯಿಸಲುತ್ಕಟ ತಪಗೈದ
ಪಟುಫಲ್ಗುಣನಿಗೆ ಕಿಟಿಯು ನೆವನದಿ
ಸ್ಫುಟದಿ ಶರವ ಕೊಟ್ಟ ನಿಟಿಲನಯನ ಧೂ
ರ್ಜಟಿಯ ನೋಡಮ್ಮ ಅಳಿಯನ ॥ ೨ ॥

ಸುಕ್ಕಿರಿಲ್ಲದ ಮುನಿಪತಿ ಮರೆಹೊಗಲು
ಸುತನ ಕೊಡಲು ಪಿತೃಪತಿ ಪಾಶದೊಳು
ಸುತನ ಬಿಗಿಯಲತಿಖತಿಯೊಳವನನು
ಮಥಿಸಿ ಶರಣನನು ಪತಿಕರಿಸಿದ ಪಶು
ಪತಿಯ ನೋಡಮ್ಮ ಅಳಿಯನ ॥ ೩ ॥

೩

ಆದಿತಾಳ

ಮಿತ್ರೆ ನೋಡುವದಿಂದು ಚಿತ್ರವೇನೆ ॥ ಪ್ರಾಣ ॥
ನಿತ್ಯ ಬಿಡದೆ ಭಿಕ್ಷಾ ವೃತ್ತಿಯೊಳಿರುವನ ॥ ಮಿತ್ರೆ ॥

ಬೇಡರ ಕೂಡಿ ಕಾಡು । ನಾಡು ಬೀಡೆಲ್ಲ ತಿರು
ಗಾಡುತ್ತ ಬಂದು ಸುಡು । ಗಾಡಿನೊಳಿರುವನ ॥ ೧ ॥

ನೆತ್ತಿಯ ಮೇಲೆ ವಿಷ ! ಕುತ್ತಿಗೆಯೊಳು ವಿಷ
ವೆತ್ತಿನ ಬೆನ್ನಡರಿ । ಸುತ್ತಸುತ್ತುವವನ ॥ ೨ ॥

ಮಿತ್ರನೋರ್ವನ ಪ್ರಿಯ । ಪುತ್ರನ ಸುಟ್ಟು ಭಸ್ಮ
ಮೂರ್ತಿಯೊಳ್ ತೊಟ್ಟು ಪಾಂಡು । ಗಾತ್ರನಾಗಿರುವನ ॥ ೩ ॥

ಧರ್ಮವರಿತು ಸೃಷ್ಟಿ । ಕರ್ಮಗೈವನ ತಲೆ
ಮರ್ಮವಿಡಿದು ಕೊಯ್ದ । ಬ್ರಹ್ಮದ್ರೋಹಿಯನೀಗ ॥ ೪ ॥

ತ್ಯಾಗವಿಲ್ಲದೆ ಸಪ್ತ । ಮೇಗೆ, ವಿಂಶತಿ ಸತಿ ।
ಭೋಗದಿಂದಾದ ಕ್ಷಯ । ರೋಗಿಯ ಪೊತ್ತವನ ॥ ೫ ॥

ಸ್ವಾಂತದೊಳಿಪ್ಮಕರಿ । ದಂತಾಮಾತ್ರಕೆ ನಿಲ-
ದಂತೆ ಊಳಿಗದವ । ರಂತೆ ಬರುವವನ ॥ ೬ ॥

೪

ಡಾಟಿ: — ಧರಣಿಗುತ್ತಮ—ಎಂಬಂತೆ ॥

ಆಗಮದ ಮೂಲಗಳು ನಾಲ್ಮೃಗ
ಮಾಗಿ ಜಗದಿರಲಾಗದೆನುತತಿ
ವೇಗವಾಗುತೆ ಪೋಗೆ ಪಿಡಿದನು
ರಾಗದಲಿ ಗಾಯನವ ಗೈದವ
ನೀಗಳೆ ನೋಡಮ್ಮ ಅಳಿಯನ ॥ ೧ ॥

ತಂದೆ ಬಂಧುಗಳಿಂಗೆ ಗತಿ ಮಾ-
ಡೆಂದು ನಿಂದನ ಪೊಂದಿ ಬಂದ ಮು
ಕುಂದ ಪದಸಂಭವೆಯ ಮುಂದಲೆ
ಯಿಂದ ಧರಿಸಿದ ಸುಂದರಾಂಗನ
ಬಂದು ನೋಡಮ್ಮ ಅಳಿಯನ ॥ ೨ ॥

ನೇತ್ರತ್ರಯದಲಿ ಮಿತ್ರ ಶಿಖಿ ವಿಧು
ಮೂರ್ತಿಗಳ ಪೊತ್ತಾ ತ್ರಿಪುರರ ನಿ-
ಗಾರ್ತ್ರಗೈದಾ ಗೋತ್ರಶತ್ರುವ
ಸುತ್ರಾಣನ ಮಾಡಿದ ಜಗತ್ರಯ
ಮಿತ್ರನ ನೋಡಮ್ಮ ಅಳಿಯನ ॥ ೩ ॥

೫೬

(ಅಷ್ಟತಾಳ)

ಧಾಟಿ:-ಲಿಂಗಜ ಮದಹರ—ಎಂಬಂತೆ ॥

ಗೆಲವೆಮಗಾಯಿತಮ್ಮ
ಕೆಲಸ ಕೈಗೂಡಿತೆಮ್ಮ
ವಿಧುವ ಕಂಡಂಭೋಧಿಯು
ಮಧುವ ಕಂಡಾ ತುಂಬಿಯು
ವಿಧದಿಂದ ಮೋದದೊಳು
ವಧುವೆಮ್ಮ ವರನ ಕೈಪಿಡಿದಳು ॥ ೧ ॥

ಸಾಗರಶಾಯಿಗೆ ಮಾ,
ನಾಗಹಾರನಿಗುಮಾ,
ಯೋಗವಾದ ಹಾಗೆ ಭಾಗ್ಯ
ಯೋಗದಿಂದ ಯೋಗ್ಯನನುರಾಗಿಸಿದಳ್ ॥ ೨ ॥

ರಾಮಗೆ ವೈದೇಹಿಯು
ಕಾಮಗೆ ರತಿರಾಮೆಯು
ಪ್ರೇಮಿಯಾಗಿ ಸೇರ್ದವೊಲು
ಕೋಮಲೆಯು ಕೊರಳಲಿ ಮಾಲೆಯಿಟ್ಟಳ್ ॥ ೩ ॥

೭

(ರಾಗ ಸುರುಟಿ—ಏಕತಾಳ)

ಸಾರ್ಥವೆನಿಸಿತಮ್ಮ । ನಿಮ್ಮಯ । ಮೂರ್ತಿಭವನ ಜನ್ಮ
ಕೀರ್ತಿವಂತೆಯೊಂಭತ್ತು ಮಾಸ ನೀ
ಹೊತ್ತು ಗರ್ಭದೊಳು ಪೆತ್ತು ಪೊರೆದುದಕೆ ॥ ೧ ॥

ಬ್ರಹ್ಮಚರಿಯ ನಡೆಸಿ । ಕಾಶಿಗೆ । ನಿರ್ಮಲದಲಿ ಗಮಿಸಿ ।
ಧರ್ಮದಿ ಬಹೆನೆನೆ ಸಮ್ಮತಕೊಡದಿವ—
ನೊಮ್ಮೆ ಮಾತುಲನು ಮಾನಿಸಿದುದಕೆ ॥ ೨ ॥

ವರುಷವಿವಗೆ ಭರಿತ । ವಾಗಲು । ಗರದಿ ಜನನಲಿಖಿತ ।
ಧರಿಸಿ ಕನ್ನಿಕೆಯರಿರುವ ಮಾಹಾತ್ಮರ
ನೆರೆಸಾಡುಗಳನು ತಿರುಗಿದ ಕಷ್ಟಕೆ ॥ ೩

ಸೊಸೆಯು ಚೆಲುವಕಾಂಬ । ಬಯಕೆಯೊಳ್ । ವ್ಯಸನಿಸಿ ಮನತುಂ
ಪಶುಪತಿ ಹರಿ ಸಾ । ರಸಭವ ಮುಖ್ಯರ
ರಸಿಯರ ಪದ ಪೂ । ಜಿಸಿ ಬೇಡಿದ ಬಗೆ ॥ ೪

ಮೌರಿ ಮುರಜವಾದ್ಯ । ತಂಬಟೆ । ಭೇರಿ ಘೋಷ ಮಧ್ಯ
ಭೂರಿಶಕಟವರ । ವಾರಣಹಯುಗಳ
ನೇರಿಬಂದ ಶೃಂ । ಗಾರ ಪ್ರಯಾಣವು ॥ ೫

ಕೊರಳಲಿ ಭೂಷಣವ । ದಂಡವ । ಕರದಲಿ ಕುಂಡಲವ
ವರಶ್ರವದೊಳುತ್ತರೀಯ ಪೀತಾಂ-
ಬರ ಶೀರ್ಷಕಗಳ । ಧರಿಸಿದ ಚೆಲುವಿಗೆ ॥ ೬

ಮಿತ್ರರ ನೊಡಗೊಂಡು । ವರ ಕ । ನ್ಯಾರ್ಥಿಯೆನುತ ಬಂದು ।
ಪುತ್ರಾರ್ಥಕೆಯೀ । ಪುತ್ರಿಯುಕರವ ಮು
ಹೂರ್ತದಿ ಪಿಡಿದು ಗೃ । ಹಸ್ಥನಾದಿವನ ॥ ೭

ಚಾತುರ್ಥಿಕ ಸಮಾರಂಭ

(ದಿಬ್ಬಣಿಗರ ಹಾಡುಗಳು)

೧

ಚಂದನಗಂಧಿ ಚಂದ್ರವದನೆ । ಇಂದೀವರನಯನೆ ।
ಸುಂದರಿ ನಾರೀಮಣಿ ಮೋಹನ್ನೆ । ಮಂದರುಚಿರಗಮನೆ ॥
ಕುಂದರದನೆ ಮಾವು । ನಂದನೆಯುಳ ಮೊಗ-
ದಂದವ ಕಾಣದೆ । ಕುಂದಿತು ಮನ, ಕರ-
ತಂದು ತೋರಮ್ಮ ತನುಜೆಯು ॥ ೧

ಕುಲವ ಪಾಲಿಪ ಗುಣನಿಧಿಯ । ಬಲುಸೊಬಗಿನ ಕಣಿಯ-
ನಿಳೆಯನು ಪೋಲುವ ಸಹನಾನ್ವಿತೆಯ । ಸುಳಿವಳಿಕುಂತಳೆಯ
ಜಲರುಹನಯನೆಯ । ಕಳವಚನೆಯ ಕೋ
ಮಲಗಾತ್ರೆಯ ಶೀ । ತಲಕರವದನೆಯ
ಚೆಲುವೆಯ ತೋರಮ್ಮ ತನುಜೆಯ ॥ ೨ ॥

ಪತಿಯಾ ಕೀರ್ತಿಯ ಕಾವ ಮತಿಯ । ಪತಿವ್ರತೆಯ ನ್ಯಾಯ
ವತಿಯ ದ್ವಿತಯ ಕುಲೋದ್ಧರೆಯ । ಹಂಕೃತಿಮತಿಜಿತೆಯ
ಜತನದಿ ಪಿತನನು । ಮತಿಯಂತಿಹ ಶ್ರೀ
ರತಿಸರಸ್ವತಿ ಪಾ । ರ್ವತಿಯರು ಪರಸುವ
ಸತಿಯಾ ತೋರಮ್ಮ ತನುಜೆಯ ॥ ೩ ॥

ಅತ್ತೆಮಾವರ ಚಿತ್ತವಿರುವ । ರೀತಿಯೊಳತಿ ಸೇವಾ
ವೃತ್ತಿಯ ನಡೆಸಿ ಪೆತ್ತಿರುವ । ಉತ್ತಮರೆಂದಿರುವ
ಭಕ್ತಿಯ ನಿರಿಸುತ । ನಿತ್ಯವು ಬಾಂಧವ-
ಮಿತ್ರನಿಕರಕನು । ವರ್ತಿಸಿ ಮೆರೆಯುವ
ಮೂರ್ತಿಯ ನೋಡಮ್ಮ ತನುಜೆಯ ॥ ೪ ॥

ಉದಯ ಸಮಯಕೆದ್ದು ಹರಿಯ — ವಿಧವಿಧ ಕೀರ್ತನೆಯ
ಪದುಳದಿ ಗೈದು ಸೌಭಾಗ್ಯದೆಯ-ತುಲಸೀದೇವಿಯ ।
ಪದಕೆ ಮಣಿದು ಮೋ । ಹದ ಗಿಣಿಗೆ ಒಲಿದು
ಮಿದುನುಡಿ ನುಡಿಯುವ । ಮಧುರೋಕ್ತಿಯ ಚೆಲ್ವ
ಚತುರೆಯ ನೋಡಮ್ಮ ತನುಜೆಯ ॥ ೫ ॥

ಮೊಸರು ಹಾಲೊಳು ಕೈಯ್ಯತೊಳೆದು-ಷಡುರಸಗಳ ಸವಿದು ।
ಬಿಸಿಲು ಗಾಳಿಯ ಕಾಣದುಳಿದು । ಕುಸುಮಗಳನು ಮುಡಿದು ।
ನೊಸಲೊಳು ಕುಂಕುಮ-ವರಶಿನವಿರಿಸುತ
ನಸುನಗೆಯೊಳು ನಮ್ಮ-ವ್ಯಸನವ ಮರೆಸುವ
ಕುಶಲೆಯ ತೋರಮ್ಮ ತನುಜೆಯ ॥ ೬ ॥

ಹಸೆಗೆ ಕರೆಯುವ ಹಾಡುಗಳು

(ಆದಿತಾಳ)   ಧರಣಿಗುತ್ತಮವಾದ — ಎಂಬಂತೆ ॥

೧

ಶಂಭು ಸಂಭವನ ಪಾದಾಂಬುಜ ನೆನೆದು
ಅಂಬುಜಾಂಬಕೆ ಶಾರದಾಂಬೆಗೆ ಮಣಿದು
ಅಂಬರಮಣಿಯಿಂದಿಂಬನೆ ಪಡೆದು
ಅಂಬುಧಿಭವೆಗೆ ಪ್ರಣಾಮವಗೈದು
ಕುಂಭಕುಚೆಯರ ಕದಂಬ ನೆರೆದು ಪೀ–
ತಾಂಬರ ಹರಿಯ ಚರಿತ್ರೆಯ ಪೊಗಳುತ
ಸಂಭ್ರಮದಲಿ ಹಸೆಗೆ ಕರದಾರು ॥ ೧ ॥

ಸುರರ ಸಂಘವು ಸೇರಿ ತ್ವರಿಯಿಂದ ತೆರಳಿ
ಸರಸಿಜೋದ್ಭವನ ಕಾಲ್ಗೆರಗಿ ಶೋಕದಲಿ
"ಧರಣಿಪವೇನನ ಪರಿಯೋನೊರೆವೆವು
ದೊರೆವ ಹವಿರ್ಭಾಗಗಳಡಗಿದವು
ಪರಮಪುರುಷ ಪುರುಷೋತ್ತಮ ಕರುಣದಿ
ಪೊರೆ" – ಯೆಂದೆರಗಿದ ಸುರರೊಡಗೂಡಿದ
ನರಹರಿಯ ಹಸೆಗೆ ಕರೆದಾರು ॥ ೨ ॥

ಹರಿಯ ಮೊರೆಯ ಕೇಳಿ ಹರಿನಾಭಿಭವನು
ಹರಿಮುಖ್ಯಾಮರರ ಸತ್ಕರಿಸಿ ಶೋಕವನು
ಹರಿಸುವೆ ಬನ್ನಿರಿ ಹರಿಗೊರೆದೆಂದು
ತೆರಳುತ ಕ್ಷೀರಾಬ್ಧಿಗೆ ನಡೆತಂದು
ಹರಿ! ಪಾಲಿಪುದೆಂಬುದ ಕೇಳಿದ ಶ್ರೀ
ಹರಿಧರ ಸಖ ನೀ ಹರುಷದಿ ಬಾರೆಂದು
ಹರಿಣಾಕ್ಷಿಯರ್ಹಸೆಗೆ ಕರದಾರು ॥ ೩ ॥

ದೇವಾದಿದೇವಾರ್ತಪಾಲ ಗೋಪಾಲ
ದೇವಕಿಯ ಸುತ ಸುನೀಲ ಶ್ರೀಲೋಲ
ಭಾವೋದ್ಭವಪಿತ ರಕ್ಷಿಪುದೆಂದು

ಭಾವದಿ ಭಜಿಸಿದ ಭಕ್ತರಿಗೊಲಿದು
ಕಾವೆನು ಭಯಬಿಡಿರೆಂದು ಮುನಿಗಳ
ಭಾವಿಸಲವರೈತಂದೆರಗಲು ಸ–
ದ್ಭಾವದಿ ಮನ್ನಿಸಿದ ಹರಿಯೆ ಬಾ ॥ ೪ ॥

"ದುಷ್ಟವೇನಗೆ ನೀವು ಕೊಟ್ಟ ಶಾಪದೊಳು
ಕೆಟ್ಟುಬಿದ್ದಾತನ ದೇಹದೊಳಾನು
ಪುಟ್ಟುವೆ" – ನೆಂಬುದ ತಿಳುಹಲು ಬಂದು
ಭ್ರಷ್ಟನೃಪೇಂದ್ರನ ಶಪಿಸುತ ಕೊಂದು
ಥಟ್ಟನೆ ವೈಯ್ಯನು ಮಥಿಸುವ ಸಮಯದಿ
ವಿಷ್ಟಪವೆಲ್ಲವ ಬೆಳಗುವ ತೇಜದಿ
ಪುಟ್ಟಿದ ಮೂರುತಿಯೆ ಹಸೆಗೇಳು ॥ ೫ ॥

ಜೀವನಕಾಧಾರವಿಲ್ಲದೆ ತೊಳಲಿ,
ಜೀವರಾಶಿಗಳೆಲ್ಲ ಮೊರೆಯಿಡೆ ಬಳಲಿ
ಈ ವಿಧ ಸಂಕಟಪಡಿಸಿದವನಿಯ
ಜೀವದಿ ಬಿಡೆನೆನುತುರಿಗೊಳಲವನೀ
ದೇವಿಯು ಭಯದಲಿ ಗೋರೂಪದೊಳಡಿ
ದಾವರೆಗೆರಗಿ ನುತಿಸೆ ಪರಸಿದ ಪರ–
ದೇವನೆ! ಬಾರೆಂದು ಕರದಾರು ॥ ೬ ॥

ಖಳವೇನಗುತ್ತಮ ಫಲವೀಯದೆಲ್ಲ
ಉಳಿಸಿಕೊಂಡಿರೆ ಕಾಲ ಕಳೆಯಲು ಬಹಳ
ಅಳಿದುದಖಿಳ ಬೀಜಗಳಿದೊ ಕರೆವೆ
ಕೊಳು ಬೇಕಾದುದನೆನೆ ಸರ್ವರಿಗೆ
ತಿಳಿಸಿ ಜಗತ್ರಯದವರಿಷ್ಟಾರ್ಥವ
ಸಲಿಸಿ ಮುದವ ಮಾಡಿದ ಮಾಧವ ನೀ
ನೊಲಿದು ಬಾರೆಂದು ಕರದಾರು ॥ ೭ ॥

ನರ, ನಾಗ, ನಾಕಲೋಕದ ಸರ್ವಜನರು
ತೆರಳಲು ಬೇಕಾದ ವಸ್ತುವ ಪಡೆದು
ಬರೆದಿಳೆಯ ಧನುಷ್ಕೋಟಿಯೊಳೆಳೆದು,

ಪುರಪೇಶ ವಿಭಾಗಗಳನೆ ಗೈದು,
ಹರುಷದಿ ಕಶ್ಯಪ ಮೊದಲಿಹ ಮುನಿಗಳ
ಕರೆಸಿ ಮಖಕೆ ದೀಕ್ಷೆಯು ತಾಳಿದ ಮುರ-
ಹರನೆ! ಬಾರೆಂದು ಕರದಾರು ॥ ೮ ॥

ಶತಯಾಗಮಧ್ಯದಿ ಶತಯಾಗನರಿತು,
ಶತಯಾಗವಳಿಸಲು ಖತಿಯೊಳು ಬರಲು
ಶತಬಲವೆರಸಿ ಶಪಥದಿರಿದಾಡಿ,
ಶತಮುಖನನು ಗೆಲ್ಲಲು ಭಯಗೂಡಿ
"ಶ್ರಿತಿನುತಚರಣಾಶ್ರಿತ ಜನರಕ್ಷಣ!
ಗತಿ ನೀ—"ನೆನ್ನಲು ಪತಿಕರಿಸಿದ ಶ್ರೀ
ಪತಿಯೆ ಬಾರೆಂದು ಕರದಾರು ॥ ೯ ॥

ಮಂಗಲಂ ವೈಕುಂಠವಾಸ ಕೇಶವಗೆ
ಮಂಗಲಂ ನರಹರಿ, ಹರಿನಾರಾಯಣಗೆ
ಮಂಗಲಮಹಿಶಯನಗೆ ಶಾಶ್ವತಗೆ
ಮಂಗಲಮಾದಿಪುರುಷ ಪೃಥುನೃಪಗೆ
ಮಂಗಲವಿಾಪ್ಸಿತವರದಾಯಕ ಶ್ರೀ
ರಂಗ ವಿಹಗರಥ ದಾಮೋದರ ಶುಭ
ಮಂಗಲ! ಬಾರೆಂದು ಕರದಾರು ॥ ೧೦ ॥

(ರೂಪಕತಾಳ) ಧಾಟಿ:— ನಲಿದು ನಲಿದು ಬಾ— ಎಂಬಂತೆ ॥

೨

ಆಡುತಾಡುತೊಯ್ಯನೆ ದಯ। ಮಾಡು ಹಸೆಗೆ ನೀಡುತಾಭಯ।
ರೂಢಿಪಾಲ! ಸಕಲಶಾಸ್ತ್ರ ಪ್ರೌಢ ಕ್ರೀಡ ವಿಾನರೂಪ ॥
ಶುದ್ಧ ನೀಲವಿದ್ಧ ಸ್ವರ್ಣ ಮುದ್ರಿಕೆಯನು ಧರಿಸಿ ಮಕುಟ।
ಬದ್ಧನಾಗಿ ಶ್ರದ್ಧೆಯಿಂದ। ಲೆದ್ದು ರಾಮಭದ್ರ ಹಸೆಗೆ ॥ ೧ ॥
ವಲ್ಲಭನ ಸೊಲ್ಲಿನಿಂದ ಕಲ್ಲರೂಪದಲ್ಲಿ ಕೆಡೆದಾ-
ಹಲ್ಯೆಗೊಲಿದ ಚೆಲ್ವ ಸೀತೆಯ ನಲ್ಲ! ನೀನು ನಿಲ್ಲದೀಗ ॥ ೨ ॥

ಪೃಥ್ವೀಶರ ಪಂಕ್ತಿಯಲ್ಲಿ । ನಿತ್ತು, ಧನುವನೆತ್ತಿ ಜನಕ-
ಪುತ್ರಿಯು ಮೃತಹಸ್ತವಿಡಿದ । ಮಿತ್ರಕುಲ ಪವಿತ್ರ ಪಾತ್ರ ॥ ೩ ॥
ತಂದೆಯಾಜ್ಞೆಯಿಂದ ವನವಿ । ನಿಂದು ಹನುಮ ಬಂಧುವಾಗಿ ।
ಸಿಂಧುವನ್ನು ದಾಟಿ ಖಳರ । ಕೊಂದ ರಾಮಚಂದ್ರ ದೇವ ॥ ೪ ॥
ಸಾಧು ಹೃದಯ ಸದನ ಭುವನಾ । ರಾಧ್ಯರಘುಜ ರಾವಳಖಳ-
ಸೂದನ ಪ್ರಸನ್ನ ಮುಖ ಪ್ರ । ಸೀದ ದೇವ ದಾಮೋದರ ॥ ೫ ॥

೩

(ಆದಿತಾಳ)

ಲೀಲೆಯಿಂದ ಬಾ ಹಸೆಗೆ-ಬಾಲಕೃಷ್ಣ ।
ಬಾಲೆಯರು ಕರೆಯುವರು ಬಾಲಕೃಷ್ಣ ॥ ೧ ॥
ವೇದವ ದಾನವನೊಯ್ಯೆ-ಬಾಲಕೃಷ್ಣ ॥
ಯಾದೋವೇಷಧಾರಿಯಾದೆ-ಬಾಲಕೃಷ್ಣ ॥ ೨ ॥
ಮಂದರ ಭೂಧರವೆತ್ತೆ-ಬಾಲಕೃಷ್ಣ ।
ಸುಂದರ ಕಮಠನಾದೆ-ಬಾಲಕೃಷ್ಣ ॥ ೩ ॥
ಧರೆಯ ದೈತೇಯನೊಯ್ಯೆ-ಬಾಲಕೃಷ್ಣ ।
ವರಾಹದೇಹವ ತಾಳ್ದೆ-ಬಾಲಕೃಷ್ಣ ॥ ೪ ॥
ಸಾಧು ಪ್ರಹ್ಲಾದನ ಕಾಯೆ-ಬಾಲಕೃಷ್ಣ ।
ಮೋದದಿ ನೃಸಿಂಹನಾದೆ ಬಾಲಕೃಷ್ಣ ॥ ೫ ॥
ಬಲಿಯೊಳಿಳೆಯ ಕೇಳೆ-ಬಾಲಕೃಷ್ಣ ॥
ಚೆಲುವ ವಾಮನನಾದೆ-ಬಾಲಕೃಷ್ಣ ॥ ೬ ॥
ನೆಲದರಸರನೆಲ್ಲ-ಬಾಲಕೃಷ್ಣ ।
ಮುಳಿದು ಗೆಲಿದರಾಮ-ಬಾಲಕೃಷ್ಣ ॥ ೭ ॥
ಸೀತೆಯ ಕೊಂಡೋಡಿದನ-ಬಾಲಕೃಷ್ಣ ।
ಘಾತಿಸಿದ ವೀರರಾಮ-ಬಾಲಕೃಷ್ಣ ॥ ೮ ॥
ಮಾತುಲಕಂಸನ ಕೊಂದ-ಬಾಲಕೃಷ್ಣ ।
ಪೂತನೀಯ ಮರ್ದಿಸಿದ-ಬಾಲಕೃಷ್ಣ ॥ ೯ ॥

ಶುದ್ಧಧರ್ಮಬೋಧೆಗೈಯ್ಯೆ-ಬಾಲಕೃಷ್ಣ ।
ಬುದ್ಧನಾಗಿ ಬಂದೆ ತಂದೆ-ಬಾಲಕೃಷ್ಣ ॥ ೧೦ ॥
ಖೂಳರ ಬಾಧೆಯು ಮೀರೆ-ಬಾಲಕೃಷ್ಣ ।
ತಾಳಿದೆಕಲ್ಕಿನಾಮ-ಬಾಲಕೃಷ್ಣ ॥ ೧೧ ॥
ಕ್ಷೀರಾರ್ಣವಾಗರ! ದೀನೋದ್ಧರ ।
ಕಾರುಣ್ಯಸಾಗರ! ದಾಮೋದರ ॥ ೧೨ ॥

೪

(ಧಾಟಿ:— ಸಖಿ ಆನಂದ ಜನಯಾನ— ಎಂಬಂತೆ)

ವಸು-ದೇವ ದೇವಕಿಯುರ ಕಿಶೋರ । ಹರಿ ಬಾಹಸೆಗೆ ॥ ಪಲ್ಲ ॥
ಶಶಿ-ದಿವಾಕರರಂತೆ ರಂಜಿಪ । ಹೊಸಹಸೆ ಬಳಿಗೆ ॥ ಅ. ಪ. ॥
ಕುಸುಮಬಾಣ । ಪಿತನೆ ನೀ ಸಂ । ತೋಷದಿಂದಲೆ ಬಲುಬೇಗ ॥ ೧ ॥
ಕಂಸದರ್ಪ । ಧ್ವಂಸ ಸರ್ಪ । ರಿಪು-ವಂಶೇಶಯಾನಾಹಿತಲ್ಪ ॥ ೨ ॥
ನಂದಗೋಪಾ-ನಂದರೂಪ । ಭವ-ಬಂಧನಮೋಚನ ಭೂಪ ॥ ೩ ॥
ಇಂದುಹಾಸ-ಇಂದಿರೇಶ । ದೇವ-ಇಂದ್ರಾವರಜ ಹೃಷಿಕೇಶ ॥ ೪ ॥
ಲೋಕರಕ್ಷ ಕಾರ್ಯದಕ್ಷ । ರುಚಿ-ರಾಕಾಶನಿಭಾಂಬುಜಾಕ್ಷ ॥ ೫ ॥
ಜಡಧಿಶಯನ-ಜಡಜನಯನ । ನಿತ್ಯ-ಭಿಡೌಜ ಸನ್ನುತಚರಣ ॥ ೬
ರಾಮ ಕೂರ್ಮ-ನಾಮ! ಧರ್ಮ । ಪ್ರಿಯ-ದಾಮೋದರ ನಾರಸಿಂಹ ॥ ೭ ॥
ಯಾದವ ನೀ ಬಾ-ಮಾಧವನೇ ಬಾ । ಮಧು-ಸೂದನ ಜನಾರ್ದನನೆ-ಬಾ ॥ ೮ ॥

೫

(ಆದಿತಾಳ)

ಧಾಟಿ:— ಕಮಲಾಂಬನ-ಎಂಬಂತೆ

ಹಸೆಗೇಳಯ್ಯ ಹೃಷೀಕೇಶರಾಯ ।
ವೆಂಕಟಾಚಲೇಶ ಲಂಕಾಧೀಶನಾಶ
ಪಂಕಜಾಕ್ಷ ಘೋರಾ-ತಂಕಪಾಪಹರ ॥ ೧ ॥

ನವನೀತ ಚೋರಾ-ರ್ಣವಜಾವಿಹಾರ
ಭವಭೀತೋದ್ಧಾರ-ಭುವನೈಕ ವೀರ ॥ ೨ ॥
ವೇಣುಗಾನಲೋಲ! ಚಾಣೂರಾದಿಮಲ್ಲ ।
ಪ್ರಾಣಘಾತ! ಮುಖ್ಯ-ಪ್ರಾಣಸೇವಿತಾಖ್ಯ ॥ ೩ ॥
ನೀಲಮೇಘವರ್ಣ-ಶ್ರೀಲಲಾಮ ದೀನ
ಪಾಲ ! ಗೋಪ ! ವನ-ಮಾಲ ! ಭಕ್ತಾಧೀನ
ಭೃತ್ಯಪಾಪಭಂಗ-ನಿತ್ಯನಿರ್ಮಲಾಂಗ
ಸತ್ಯಭಾಮಾಸಂಗ-ಸ್ತುತ್ಯ ದೇವೋತ್ತುಂಗ ॥

೬

(ಆದಿತಾಳ) ಧಾಟಿ: — ಹಾ ಕರಿಣಂ ಕರಿಣಂ ಕವ — ಎಂಬಂತೆ ॥

ಬಾ ! ಭಾಮಾಮಣಿ ! ಬಾ ಹಸೆಗೆ ।
ಶೋಭನೀಯಮೃಗಶಾಬನೇತ್ರಯುಗೆ ॥
ನೀರೆ ! ನೀರೇಜಾಯತ ನಯನೆ !
ನಾರಿ ! ನಾರೀಗಣಮುಕುಟಮಣಿ !
ಧಾರಿಣೀಶ್ವರ ರಾಮನ ಮನವ
ಸೂರೆಗೊಂಬ ಯೌವನ ಶೃಂ-
ಗಾರಿ ಮೋಹಕಾರಿ ಸಾರಿ ॥ ೧ ॥
ಚಂದ್ರವದನೆ ! ಚಾರುಶೀಲೆ
ಸುಂದರಿ ಸೌಮಂಗಲೆ ಬಾಲೆ
ಕುಂದಮುಕುಲವಿರಾಜಿತರದನೆ
ಬಂಧುರಾಂಗಿ ಭಕ್ತಾಭೀಷ್ಟ
ಸಂದಾಯಕಿ ಶ್ರೀನಾಯಕಿ ॥ ೨ ॥
ಸೀತೆ ವೀರಮಾತೆ ವಿಶ್ವ
ನಾಥೆ ! ರಾಮಪ್ರೀತೆ ಭೂಮಿ
ಜಾತೆ ಭೀತಜನಾಭಯ
ದಾತೆ ನೀತಿವಂತೆ ಪೂತಚರಿತೆ
ಜಾತರೂಪದೇಹೆ ಬೇಗ ॥ ೩ ॥

೭

(ಆದಿತಾಳ)

ಬಾಲೆ ! ಹಸೆಗೇಳೆಲೇ-ಸದ್ಗುಣ ಶೀಲೆ !
ನೀಲಕುಂತಳೆ-ನಿತ್ಯಲೋಲೆ ಮಂಗಳೆ ಮುದ್ದು ॥
ಕನ್ನೆ ! ಕಂಜದೆಸಳೆಗಣ್ಣೆ ! ಕಾಮಿನಿಯರ
ರನ್ನೆ ! ಮೋಹನ್ನೆ ಸುರ-ಹೊನ್ನೆಸರವನ್ನೆ ಮುಡಿದು ॥ ೧ ॥

ಸುತ್ತು ಕೆತ್ತಿದ ನೀಲ-ರತ್ನಕಂಭದ ಮೇಲಾ ।
ಮುತ್ತು ವಜ್ರಗಳಿಂದ-ಚಿತ್ರಿತಮಂಟಪಕೆ ॥ ೨ ॥
ಸುರಸುಂದರಿಯರು ಸು-ಸ್ವರದಿಂದ ಕರೆವರು
ಸರಸದೊಳರಸಿನ-ವೊರೆಸುತ ಚಂದದಿ ॥ ೩ ॥

ಕರ್ಣಾಭರಣವಿಟ್ಟು-ಸ್ವರ್ಣಾಭರಣ ತೊಟ್ಟು ।
ಕಣ್ಣ ಕಾಡಿಗೆಯಿಟ್ಟು-ಬಣ್ಣದ ಬಟ್ಟೆಯುಟ್ಟು ॥ ೪ ॥
ಬೆಣ್ಣೆಯ ಪೋಲ್ವ ಸುಣ್ಣ--ಸಣ್ಣ ವೀಳ್ಯದ ಪರ್ಣ ।
ಚೂರ್ಣಪೂಗಾದಿಗಳನ್ನೆ ಚರ್ವಿಸಿ ಬೇಗ ॥ ೫ ॥

೮

(ಆದಿತಾಳ)

ಹಸೆಗೇಳೇ ಬಾಲೆ ಗೌರಿದೇವಿಯೆ !
ಪಶುಪತಿಪ್ರಿಯೆ ! ಪಾದಸದಳನೇತ್ರೆಯೆ ॥ ಪ. ॥
ನಸುನಗುತಲೆ ಸಂ । ತಸವೊಳು ಹೊಸ ॥ ಹಸೆ ॥ ಅ.ಪ ॥

ಸುರತರುಕುಸುಮಗಳ । ಸುರಭಿಸುಮಂಗಳ
ಶಿರದೊಳಗಿರಿಸಿ, ನೇವರಿಸಿ ತುರುಬ ॥ ಹಸೆ ॥ ೧ ॥

ಚಂದ ಕಾವಿ ಸೀರೆಯ । ಚಂದವೊಳುಟ್ಟೆಸೆವ ।
ಕುಂದಣದಂದುಗೆಯಿಟ್ಟು । ಮಂದಯಾನದಿಂದ ॥ ಹಸೆ ॥ ೨ ॥

ಚರಣಾರವಿಂದವ । ಸ್ಮರಣೆಯ ಗೈಯುವ
ಶರಣರ ಮನದಿಹ । ವರವಕೊಡಲು ॥ ಹಸೆ ॥ ೩ ॥

ಸೀಮಂತ

(ಧಾಟಿ:-ಯಮುನೆ-ಪಾಪರಾಶಿದಮನೆ ಎಂಬಂತೆ)

ಸರ್ವರು-ಉಡಿಲ ತುಂಬಿಸಿದರು
ಬಾಂಧವರು-ಹರುಷದಿ ಭಾರ್ಗವಿಯಾ
ನಾಳಿಕೇರ ತಂಡುಲ ಕದಳೀ ಫಲ
ಬೆಲ್ಲ ಹಿಂಗಾರ ತಾಂಬೂಲಗಳಿಂ
ಬಾಲೆ ನೀನು ಸುತವತಿಯಾಗು ಸುಮಂಗಲೆಯೆಂದೆನಿಸೆನುತ
ಪ್ರಥಮ ರಜೋವತಿಯಾಗಿಹ ದಿವಸ
ಕ್ಷಿತಿಯ ಮೆಟ್ಟದಿದುರ್ಚಿತ ಕ್ರಮದಿಂ
ಹಿತದಲಿ ದೋಷರಹಿತ ದಿನ ಗರ್ಭವತಿಯೆಂದೆನಿಸಿಹಳ
ಮೂರನೆ ಮಾಸದಿ ಪುಂಸವನವನು
ಪೂರ್ಯ್ಯಸುತೆ ಮೇಲ್ ಸೀಮಂತವನು
ಆರೊಳು ಶುಭವಾಸರಲಗ್ನದಿ ನೆರವೇರಿಸೆ ಸಮ್ಮುದದಿ
ಕಟಿಯು ಕಂಟಕದಿ ಪೂಗಬಿಂಬಗಳ
ಅಟವಿಯುದುಂಬರ ಫಲಕುಸುಮಗಳ
ಘಟಿಸಿದ ಹಿಂಗಾರವ ಪತಿ ತಾನು ಸ್ಫುಟದಿ ಶಿರದಿರಿಸಿದ
ಶಿಶುವಿನ ಬಳಕೆಗೆ ತಕ್ಕ ಬಯಕೆಯ
ಬಸುರಿಗೆ ಬಳಸಿದರೆಲ್ಲವ ಬಹಳ
ಶಶಿಮುಖಿ ತೋಷದೊಳಿರೆ ನಾರಿಯರೂ ಆರತಿ ಬೆಳಗಿದರೂ

ಮಂಗಳಾರತಿ

೧

(ಆದಿತಾಳ)

ಮುಡಿಗೆ ಮುಡಿದ ಪೂ । ಗುಡಿಗಳವಡುವಾ
ರಡಿಗಳ ನಿಡುದನಿವಿಡಿದು ಶೋಭನವ ।
ಬಿಡದುರಿ ಪಾಡುವ । ಮಿಡಿಮೊಲೆಯರು ಸಿರಿ
ಗೊಡೆಯಗಾರಾತೀಯಾ ಬೆಳಗಿರೆ ॥ ೧ ॥

ಬಾಯಿತೆರೆದು ಬ್ರಹ್ಮಾಂಡಗಳನ್ನು
ತಾಯಿಗೆ ತೋರಿ, ಮರಗಳೆರಡನ್ನು ॥
ಮೆಯ್ಯೊಳು ದುಡುಕಿ ಕೆಡಹಿ ಧನದಜರಿಗೆ ।
ದಿವ್ಯಪದವ ಕಾಣಿಸಿರುವ ಗೋವಳರಾಯನಿಗಾರತಿಯಾ ಬೆಳಗಿರೆ ॥ ೨ ॥

ಕಾಳಿಂಗನ ಫಣದಲಿ ನಲಿದವನ
ಕೀಲಾಲನಿಧಿಗೆ ಕಳುಹಿ, ಸುರಪನ ॥
ಸೋಲಿಸಿ ಶೈಲಕೆ ಬಲಿಯು ಕೊಡಿಸಿ ಮಳೆ
ಗೇಳು ದಿವಸ ಗಿರಿಯೆತ್ತಿದ ರಾಜಗೋಪಾಲನಿಗಾರತಿಯು ಬೆಳಗಿರೆ ॥ ೩ ॥

೨

(ಆದಿತಾಳ) ಧಾಟಿ:—ಭವಾನುತ :—ಎಂಬಂತೆ ॥

ಎತ್ತಿದರು ದೈತ್ಯಾರಿಗೆ । ಮುತ್ತೈದೆಯರು । ಆರತಿ—॥
ಚಿತ್ತಜನ ಪೆತ್ತ ಘನ । ಮೂರ್ತಿ ಪುರುಷೋತ್ತಮಗೆ ।
ಉತ್ತಾನಪಾದಾತ್ಮಭವ । ನುತ್ತಮನೆನಿಸಿದಗೆ ॥ ೧ ॥

ನೀರೇಜ ಕುಮಾರ ಪಿತ ! ನಾರಾಯಣ ಘೋರಾಘ ಸಂ-
ಹಾರ ವನಹಾರ ಭವ । ದೂರ ಶುಭಾಕಾರಾಚ್ಯುತ ॥ ಎತ್ತಿ ॥ ॥ ೨ ॥

ಭೀಕರಾದಿಸೂಕರ! ವಿಾ । ನಾಕಾರ! ತ್ರೈಲೋಕೇಶ್ವರ ।
ಕೋಕನದಾಲೋಕನ! ಸು । ಧಾಕರಸಂಕಾಶಾನನ ॥ ಎತ್ತಿ ॥ ೩ ॥

ವಾಮನ ಶ್ರೀರಾಮ ಘನ । ಶ್ಯಾಮಾಮಿತನಾಮ ಬಲ ।
ಭೀಮಾದ್ಭುತ ಕರ್ಮ ಗುಣ । ಧಾಮೋತ್ತಮ ದಾಮೋದರ ॥ ಎತ್ತಿ ॥
॥ ೪ ॥

೩

(ಧಾಟಿ: — ಪಾಹಿಗೋಪವೇಷ — ಎಂಬಂತೆ)
(ಆದಿತಾಳ)

ಬೆಳಗುವೆನಾರತಿಯ ।
ಬಿಲೇಶಯ-ಶಯನ! ಗೊಲ್ಲರಾಯ ॥ ಪಲ್ಲ ॥
ಕುಶೇಶಯ-ನಯನ! ಲೋಕದೊಡೆಯ ।
ಮಹೀಪ್ರಿಯ-ಶರಣಜನಸಹಾಯ ।
ಜಗನ್ಮಯ-ಬೆಳಗುವೆನಾರತಿಯ ॥ ಅ.ಪ. ॥
ವಿನತಾಸುತ ಸುರಥ ।
ವಿಬುಧವಿನುತ-ವಿಶ್ವನಾಥ ॥
ವಿರಾಜಿತ-ಶ್ರೀವತ್ಸಾಂಕಿತ! ತುಲಸೀಭೂಷಿತ ।
ಸುಲಲಿತ ಪೀತಾಂಬರ! ಮನ್ಮಥಪಿತ ॥೧॥
ನೀಲ ನೀರದ ನಿಭ।
ನಳಿನನಾಭ-ಶ್ರೀವಲ್ಲಭ ॥
ಸರೋಜಭ-ವಾದಿವಿನುತವಿಭವಾಸುರವೈರಿ! ಭ-
ವಾನಿಸಹಜ ಶುಭ ವಿಗ್ರಹ! ಸುಪ್ರಭ ॥ ೨ ॥
ವೇದವೇದ್ಯ! ರಾಧಾ ।
ರಮಣ! ದ್ವಿರದ-ರಾಜವರದ ॥
ಪ್ರಸೀದ ಸ-ಮಾಧಿಗಮ್ಯಪದ! ಸಾಧುಜನಾಸ್ಪದ ।
ಯಾದವೇಂದ್ರ! ದಾಮೋದರ! ವರದ ॥ ೩ ॥

೪

ಧಾಟಿ:—ನಾರದ ಪ್ರಿಯಕೃಷ್ಣ-ಎಂಬಂತೆ ॥

ನೀರೆಯರಾರತಿಯ । ಬೆಳಗಿರೆ । ನೀರೆ....॥
ಕ್ಷೀರಪಾರಾವಾರದ ಕು । ಮಾರಿ ಮಾರಮಣಿ ಶ್ರೀಗೆ ॥
ಗೌರಿ ಶಾರದಾದಿ ಸುರ-ನಾರೀ ಪರಿವಾರ ಸೇರಿ
ಆರತಿಯ ತೋರುವ ಸ-ರೋರುಹದಳಾಂಬಿಕೆಗೆ ॥ ೧ ॥

ಪದುಮುಸದನ ನೀ-ರದ ಕಚದ ಕೋರಕ ।
ರದನದ ವಿಧುಸಮ-ವದನದ ದೇವಿಗೆ ॥ ೨ ॥

ಕಾಂಚನದ ಕಾಂಚಿ ಚೆಲ್ವ। ಕಂಚುಕದ ಮಿಂಚುತಿಹ
ಪಂಚವರ್ಣದ ಚೇಲದ। ವಾಂಛಿತವನೀವಳಿಗೆ ॥ ೩ ॥

ಸುರಗಿ ವಸಂತಿ ಜಾತಿ। ಸುರಭಿ ಸೇವಂತಿ ಮಾಗಿ।
ಮರುಗಾದಿ ಸುಮಗಳು। ಶಿರದಿ ಶೋಭಿಪಳಿಗೆ ॥ ೪ ॥

ಮುಗುಳು ನಗೆಮೊಗದ। ಮೃಗಮದ ತಿಲಕದ।
ಜಗದೊಡತಿಗೆ ದಾ। ಮೋದರನರಸಿಗೆ ॥ ೫ ॥

೫

ಧಾಟಿ:–ಚಂದ್ರನು ಮೂಡುವನಿದೊ – ಎಂಬಂತೆ

ಎತ್ತಿದರಾರಾತಿಯನು। ಕಾತ್ಯಾಯಿನಿ। ಗೆತ್ತಿದ....॥
ಮುತ್ತು ಮಾಣಿಕ್ಯಂಗಳ। ಕೆತ್ತಿದ ಹರಿವಾಣದೊಳ್ ॥

ಚಂದನಗಂಧಿಯುರು। ಚಂದದಿಹ ಚೆಂದುಟಿಯು।
ಚಂದಿರನ ಪೋಲ್ವ ಮೊಗ। ದಿಂದಿರುವ ಸುಂದರಿಗೆ ॥ ೧ ॥

ಜಾಂಬುನದ ಕುಂಭ ಕುಚ। ದಂಬುಜದಳಾಂಬಕಿಗೆ ॥
ಕಂಬುನಿಭ ಕಂಠಿಗೆ, ಲೋ। ಕಾಂಬೆಗೆ, ಪೀತಾಂಬರೆಗೆ ॥ ೨ ॥

ಮಾಲತಿ, ಕೇತಕಿ, ತ। ಮಾಲ ಕಮಲ ಮಲ್ಲಿಕಾ।
ಮಾಲೆಗಳ ನಲ್ಮುಡಿಯು। ಮೇಲೆ ಮುಡಿದಾ ಬಾಲೆಗೆ ॥ ೩ ॥

ಭಂಗಾರದ ನಾನಾಭರ-ಣಂಗಳನು ಸರ್ವಾಂಗಕೆ
ಸಿಂಗರಿಸಿ ಭಂಗಿಯೊಳು। ಕಂಗೊಳಿಪ ಮಂಗಲೆಗೆ ॥ ೪ ॥

ಕಾಶಿಯು ಪ್ರಕಾಶಿಸುವ। ವಾಸದ, ಕುಪ್ಪಸದ, ಸು-
ಕೇಶದ ಸುವಾಸಿನಿಗೆ। ತೋಷದಿ ವಿಲಾಸಿನಿಯ ॥ ರೆತ್ತಿ ॥ ॥ ೫ ॥

ಕನ್ನಡದ ಕರಿನಾಡಾದ ಕಾಸರಗೋಡಿನ ಒಬ್ಬ ಹೆಸರಾಂತ ಕವಿಗಳು — ಶ್ರೀಮಾನ್ ಪುಂಡೂರು ದಾಮೋದರ ಪುಣಿಂಚಿತ್ತಾಯರು.

ಅವರ ಕವಿತ್ವದ ಮಹತ್ವವನ್ನರಿಯಬೇಕಾದರೆ ವೈವಿಧ್ಯಪೂರ್ಣವಾದ ಅವರ ಸಾಹಿತ್ಯ ಕೃತಿಗಳನ್ನು ಓದಬೇಕು.

ರಾಷ್ಟ್ರೀಯ ಗೀತೆಗಳ, ಸಾಮಾಜಿಕ ಕೃತಿಗಳ, ಜಾನಪದ ಹಾಡುಗಳ, ಹಾಗೂ ಭಕ್ತಿಪರವಾದ ಕವಿತೆಗಳ — ರಚನೆಯಲ್ಲಿ ಶ್ರೀಯುತರದು ಪಳಗಿದ ಕೈ.

ತುಳು ಸಾಹಿತ್ಯವನ್ನು ಬರೆಯುವುದರಲ್ಲಿಯೂ ಅವರಿಗೆ ಜಾಣ್ಮೆಯಿದೆ — ಎಂಬುದನ್ನು, ಈ ಹಿಂದೆ ಪ್ರಕಟವಾದ ಅವರ "ಕುಂಬಳೆ ಸೀಮೆಯ ಚರಿತೆ"ಯೊಂದೇ ಸಾರಬಲ್ಲುದು.

ಸದ್ಯ ಈ ಪ್ರಕಟಣೆಯಲ್ಲಿ ಅವರ ಸೋಬಾನೆ ಹಾಡುಗಳ ಶೋಭೆಯನ್ನು ನೀವು ಕಾಣಬಹುದು.